ಅಪರಂಜಿ

ಮಾರ್ಚ್ 1993

ತಿಳಿನಗೆಯ ಕಾರಂಜಿ



* ಪ್ರಕಾಶ್
* ಎಂ. ಎಸ್. ಕೆ.
* ಕಂ. ಭಂ. ಕೃಷ್ಣಮೂರ್ತಿ
* ಪೀಪಿ
* ಶಿವು
* ಗೌತಮ
* ಡಾ|| ಶಿವರಾಮ ಕಾರಂತ
* ಸುಬ್ರಹ್ಮಣ್ಯ
* ಸೀ. ಆರ್. ಸತ್ಯ
* ಪಾ. ಮ್ಯ. ಸೂರಿ
* ಶ್ರೀಪ್ರ

ಬಿಡಿ ಪ್ರತಿ: 2 ರೂ. 50 ಪೈ.



ಸಂಪುಟ ೧೦ ಮಾರ್ಚ್ ೧೯೯೩ ಸಂಚಿಕೆ ೬

ಕಲುಷಿತ

ಚಿತ್ತ ಶುದ್ಧಿಯ ಕೆಡಿಸಿ
ಮನ ಮಾಲಿನ್ಯಗೊಳಿಸಿ
ಬುದ್ಧಿ ವಿಕಲ್ಪಿಸಿ
ದೇಹ ಮನ ಸ್ವಾಸ್ಥ್ಯ
ಅಸ್ತವ್ಯಸ್ಥ ಗೊಳಿಸಿ-
ದಳೆಂದಾರೋಪಿಸಿ
ದೂರು ದಾಖಲಿಸಿವಳು
ಭಗ್ನ ಪ್ರೇಮಿಯೊಬ್ಬಳು
ಗ್ರಾಹಕರ ವೇದಿಕೆಯೊಳು,

— ಮಂದಗೆರೆ ಸೋಮು

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ
2 ರೂ. 50 ಪೈ.
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ
250 ರೂ.

ವಿಳಾಸ
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೦ ಮಾರ್ಚ್ ೧೯೯೩ ಸಂಚಿಕೆ ೬

ಇವನು ಸರ್ವೇಶ್ವರನು, ಭೂತಗಳ ಅಧಿಪತಿ, ಭೂತಗಳನ್ನು ಕಾಪಾಡುವವನು.
— ಬೃಹದಾರಣ್ಯಕ

ಆದಿತ್ಯ ಮತ್ತು ಕಣ್ಣುಗಳ ಒಳಗಿರುವ ಪುರುಷನು ಸಂಸಾರಿಯೆಂದು ಹೇಳಲು, ವೇದಾಂತವಿರೋಧಿಗಳು ಇದನ್ನು ಉದಾಹರಿಸುತ್ತಾರೆ.

ಕಣ್ಣು. ಆದಿತ್ಯರಲ್ಲಿರುವ ಪುರುಷನು ಪರಮೇಶ್ವರನೆನ್ನುವುದು ವೇದಾಂತದ ಸಿದ್ಧಾಂತ. ಸಪ್ತ ಖಂಡಗಳಲ್ಲೂ ಇರುವ, ಅದನ್ನು ಒಪ್ಪದಿರುವ ಇವನೂ. ಸಮಸ್ತ ಅಧಿಕಾರಗಳನ್ನು ಪಡೆದಿದ್ದಾನೆ. ಅನೇಕ. ಕೋಟಿಗಟ್ಟಲೆ ಪ್ರಾಣಿಗಳು ಇವನನ್ನು ಕೆಲವುಕಾಲ ಅಧಿಪತಿಯೆಂದು ಒಪ್ಪುತ್ತವೆ,

ಆದರೆ ಇವನು ಜನ ಪೀಡೆಮಾಡುತ್ತಿರುವ ಅನೇಕ ಭೂತಗಳಿಗೆ ಒಡೆಯ. ಅವನ್ನು ಕಾಪಾಡುತ್ತಾನೆ. ಅವುಗಳ ಬೆಂಬಲದಿಂದ ತಾನು ಸರ್ವೇಶ್ವರನಾಗಿ ಉಳಿಯುತ್ತೇನೆ ಎಂದು ಭ್ರಮಿಸಿದ್ದಾನೆ, ತನ್ನ ಹಿಂದಿನ ಅನೇಕರು ಅವೇ ಭೂತಗಳಿಂದ ವಂಚಿತವಾಗಿರುವುದನ್ನು ಕಂಡಿದ್ದರೂ, ಕಾಣುತ್ತಿದ್ದರೂ ಕುರುಡನಂತೆ ಮುನುಗ್ಗುತ್ತಾ ಹೋಗುತ್ತಾನೆ,

ಏಕೆಂದರೆ ಪರಮೇಶ್ವರನು ಇವನ ಪಾಲಿಗೆ ಇಲ್ಲ.

ಕಣ್ಣಿನ ತೆರೆಯಮೇಲೆ ಬೀಳುವ ಚಿತ್ರವೇ ದೃಷ್ಟಿಗೆ ಕಾರಣ ಎಂದವನು ನಂಬಿದ್ದಾನೆ.

ಕಣ್ಣಿನಲ್ಲೂ ಆದಿತ್ಯನಲ್ಲೂ ಇರುವ ಪುರುಷನೇ ಋಕ್ಕು, ಯಜಸ್ಸು, ಸಾಮ, ಅವನು ಎಲ್ಲಾ ಪಾಪಗಳನ್ನು ಬಿಟ್ಟು ಎದ್ದಿದ್ದಾನೆ ಎಂದು ಹೇಳಿದರೆ 'ಏ, ಇದೇನು ಬೋರಗಳೆ ! ' ಎನ್ನುತ್ತಾನೆ,

ಆದುದರಿಂದ ಎಲ್ಲವೂ ಇವನನ್ನು ತಿರಸ್ಕರಿಸುತ್ತವೆ. ಇವನು ಕಾಪಾಡಿದ ಭೂತಗಳೇ ಇವನನ್ನು ನುಂಗುತ್ತವೆ. ಆದುದರಿಂದ ಇವನು ಈಗಲಾದರೂ ಎಚ್ಚೆತ್ತು ಕೊಳ್ಳಲಿ.



ಪ್ರಕಾಶ್

ಮೀನುಗಾರಿಕೆಗೆ ಬಾಲಕರ ಅಪಹರಣ

ಸುದ್ದಿ

ಮೀನುಗಳ ಬದಲು ಬಾಲಕರನ್ನೇ............?

* * *

ದೆಹಲಿ ಕೋಮು ಗಲಭೆಗೆ ಕೋತಿ ಕಾರಣ ?

ಪತ್ರಿಗೆ

ಆಯೋಧ್ಯ ಗಲಭೆ ನೋಡಿ ಹನುಮನಿಗೂ ಕೋಪ ಬಂದಿರಬೇಕು !

* * *

ಪಾಕ್‌ಗೆ ರಷ್ಯ ಮಿಲಿಟರಿ ನೆರವು ಇಲ್ಲ.

ಯೆಲ್ಸಿನ್

ಕೊಡುಕ್ಕೆ 'ಮಿಲಿಟರಿ' ಇದ್ದರೆ ತಾನೆ ?

* * *

ಹುಬ್ಬಳ್ಳಿ ಶಾಂತ ಪರಿಸ್ಥಿತಿ

ಶೀರ್ಷಿಕೆ

ಇದೇ ಸುದ್ದಿಯಾಗುವ ಪರಿಸ್ಥಿತಿ ಇದೆಯಲ್ಲ ಅಂತ ಅಪರಂಜಿ ಕಳವಳ ಪಟ್ಟಳಂತೆ !

* * *

ಬಸ್ ಪ್ರಯಾಣ ದರ ಏರಿಕೆ

ಸುದ್ದಿ

ಇನ್ನು ನಾವು ಬಸ್ ಏರುವಂತಿಲ್ಲ !

*   *   *

ಬುಕ್ ಫೇರ್‌ನಲ್ಲಿ ಯಾವುದು ಅತ್ಯುತ್ತಮ
ಅಂದರೆ, ಆ ಅಗಲದ ಹಪ್ಪಳ ಅನ್ನೋದೇ ?

*   *   *

ಮೇಘಾಲಯದಲ್ಲಿ ಕಾಂಗ್ರೆ ಸಂದಿಗ್ಧ ಪರಿಸ್ಥಿತಿ

ಸುದ್ದಿ

ಒಂಭತ್ತನೇ ಮೇಘದ ಮೇಲೆ ತೇಲಿದುದರ ಫಲ ?

*   *   *

ಸೌಹಾರ್ದತೆಯೇ ಈಗಿನ ಅತ್ಯಂತ ಪ್ರಧಾನ ಅವಶ್ಯಕತೆ

ಪ್ರಧಾನಿ

ಅಯೋಧ್ಯ ರೋದನ ಅಂದರೆ ಇದೇ !

*   *   *

ಸಾಬೂನು ಕಾರ್ಖಾನೆ ವ್ಯವಹಾರ—ವಿಚಾರಣೆಗೆ ಆಗ್ರಹ

ಪತ್ರಿಕೆ

ಸಾಬೂನನ್ನೇ ತೊಳೆಯ ಬೇಕಾದ ಪರಿಸ್ಥಿತಿ ! !

ಬೀಗದ ಸಮಸ್ಯೆ

ಎಂ. ಎಸ್. ಕೆ.

ಅರವತ್ತರ ದಶಕದ ಮಾತು, ನಾನಾಗ ಒಬ್ಬ ಯುವ ಇಂಜಿನಿಯರ್, ಕೆಲಸದಲ್ಲಿ ಶ್ರದ್ಧೆ, ನಿಷ್ಠೆ, ಇತ್ಯಾದಿ ಮನಸ್ಸಿನಲ್ಲಿ ಧಾಳಿಮಾಡುತ್ತಿದ್ದವು. (ವಯಸ್ಸಾದಂತೆ ಶಕ್ತಿಯು ಜೊತೆ ಇವೂ ಕುಗ್ಗುವ ಸ್ವಭಾವದವು. ಎಕ್ಸ್‌ಪೀರಿಯನ್ಸ್ ಪ್ರಭಾವ ಇರಬಹುದು), ನಾನು ಕೆಲಸ ಮಾಡುವ ಫ್ಯಾಕ್ಟರಿ ಶುರು ಆಗುವುದು ಬೆಳಿಗ್ಗೆ ಏಳೂ ಮೂವತ್ತಕ್ಕೆ, ನಾನು ಬಿ.ಟಿ.ಎಸ್, ಹಿಡಿದು ಹದಿನೈದು ಕಿ. ಮೀ. ಪ್ರಯಾಣ ಮಾಡ ಬೇಕು, (ಆಗ ಬಿ.ಟಿ.ಎಸ್. ಸ್ವಲ್ಪ ನಂಬಲರ್ಹವಾಗಿತ್ತೆನ್ನಿ !) ಬಸ್ ಅಂದು ಸ್ವಲ್ಪ ತಡವಾಯಿತು. ಫ್ಯಾಕ್ಟರಿ ಗೇಟ್ ತಲುಪಿ ನನ್ನ ಡಿಪಾರ್ಟ್‌ಮೆಂಟ್ ಕಡೆ ದಾವು ಗಾಲುಹಾಕುತ್ತಿದ್ದೆ 7-30ರ ವೇಳೆಗೆ ಪಂಚ್ ಮಾಡ ಬೇಕಲ್ಲ! ದೂರದಿಂದ ಡಿಪಾರ್ಟ್‌ಮೆಂಟ್ ಕಾಣತ್ತಿದ್ದಂತೆ ಏಕೋ ಜನರೆಲ್ಲ ಹೊರಗೆ ಬಾಗಿಲ ಹತ್ತಿರ ಗುಂಪು ಕಟ್ಟಿದಂತೆ ತೋರಿತು, ಏನಪ್ಪಾ ಏನಾದರು ಸಂಪೇ ಎಂದು ಗಾಬರಿಯಾದೆ. ಎದೆ ಡವಡವ! ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಮಾಮೂಲು ಕಂಡಿತು. ಸ್ವಲ್ಪ ಓಡಿದೆ. ಡಿಪಾರ್ಟ್‌ಮೆಂಟ್ ಹತ್ತಿರವಾದಂತೆ ಚೆನ್ನಾಗಿ ಕಂಡಿತು, ಎಲ್ಲರೂ ಹೊರಗಿದ್ದಾರೆ, ಕೆಲವರು ಹುಲ್ಲಿನಮೇಲೆ ಕೂತು ಹರಟುತ್ತಿದ್ದಾರೆ. ಕೆಲವರು ಪೇಪರ್ ಓದುತ್ತಿದಾರೆ. ಕೆಲವರು ಬೀಡಿ ಹಚ್ಚಿ ದಂ ಎಳೆಯುತ್ತಿದಾರೆ. ಬಾಗಿಲಿನ ಹತ್ತಿರ ಕೆಲವರು ಗುಂಪುಸೇರಿ ಏನೋ ನೋಡುತ್ತಿದ್ದಾರೆ. ಅವಸರವಸರವಾಗಿ ಅಲ್ಲಿ ಹೋಗಿ ಆಗುಂಪು ಸೇರಿದೆ, ಸೆಕ್ಯೂರಿಟಿ ಕಾವಲುಗಾರ ಬೀಗ ತೆಗೆಯಲು ಪ್ರಯತ್ನಿಸುತ್ತಿದ್ದ. ಅವನು ಹೇಳಿದ "ಸಾರ್ ಬೀಗದ ಕೈ ಮಿಸ್ ಆಗಿದೆ." ಉಸ್ಸಪ್ಪ ಎಂದು ನಿಟ್ಟುಸಿರು ಬಿಟ್ಟೆ. ಸಧ್ಯ ಕಾರ್ಮಿಕರ ಸಂಪಲ್ಲವಲ್ಲಾ !

ನಮ್ಮ ಸಂಸ್ಥೆಯ ಅಭ್ಯಾಸ — ರಾತ್ರಿ ಪಾಳಿಯಾದಮೇಲೆ ಎಲ್ಲಾ ಡಿಪಾರ್ಟ್‌ಮೆಂಟ್ ಬಂದ್ ಮಾಡಿ ಬೀಗ ಹಾಕುತ್ತಾರೆ. ಬೆಳಿಗ್ಗೆ 7 ಘಂಟೆಗೆ ತೆಗೆಯುತ್ತಾರೆ. ಆದರೆ ರಾತ್ರಿಪಾಳಿಯ ವಾಚ್‌ಮನ್ ಬೀಗದ ಕೈ ಎಲ್ಲೋ ಇಟ್ಟುಬಿಟ್ಟಿದ್ದ, ಪಾಪ ನಿದ್ದೆಗಣ್ಣಿರಬೇಕು, ಬೆಳಗಿನವನಿಗೆ ಪರದಾಟ. ನಿಮಿಷಗಳು ಉರುಳತೊಡಗಿದವು. ಏಳೂಮುಕ್ಕಾಲಾಯಿತು. ಉಹುಂ, ಎಂಟಕ್ಕೆ ಬಂತು, ಇನ್ನೂ ಇಲ್ಲ. ಕಾರ್ಮಿಕರೆಲ್ಲಾ ಖುಶಿಯಾಗಿದ್ದರು. ಕೆಲವರು ಹಾಗೇ ಹುಲ್ಲಿನಮೇಲೆ ಉರಳಿ

ಕೊಂಡರು, ದಿನನಿತ್ಯ ಲೇಟಾಗಿ ಬಂದವರಿಗೆಲ್ಲಾ ಒಳಗೊಳಗೆ ಖುಷಿಯೋಖುಷಿ, ಮೇಲೆ ಮಾತ್ರ ಗೊಣಗುತ್ತಿದ್ದರು. "ಈ ಸೆಕ್ಯುರಿಟಿ ಏನೂ ಪ್ರಯೋಜನವಿಲ್ಲ. ಮೋಸ್ಟ್ ಇನ್-ಎಫಿಷಿಯಂಟ್" ಅಂತ. ಸೆಕ್ಯುರಿಟಿಯುವ ತಿರುಗಿಬಿದ್ದ. ನಾನು ಸಮಾಧಾನಮಾಡಿ ಅವನನ್ನು ಕಾರ್ಯೋನ್ಮುಖನನ್ನಾಗಿ ಮಾಡಿದೆ. ಬೀಗದಕೈ ಗೊಂಚಲು ಹಿಡಿದು ಹುಡುಕ ಹೋದಗಿದ. 8-10 ಆಯಿತು. "ಸಾರ್ ನಾನು ಆಫೀಸಿಗೆ ಹೋಗಿ ಇನ್ನೊಂದು ಗೊಂಚಲು ತರುತ್ತೇನೆ"ಂದು ಹೇಳಿ ಸೈಕಲ್ ಹಿಡಿದು ಹೊರಟೇ ಬಿಟ್ಟ. ನಾನು ಒಬ್ಬನೇ ನಿಂತೆ, ಸಹಾಯಕರೆಲ್ಲಾ ಚದುರಿ ಬೀಡಿಗೀರಿ ಹಾಯಾಗಿ ಕುಳಿತರು. ನನ್ನ ಮುಜುಗರ ಜಾಸ್ತಿ ಆಯಿತು, 8-30ಗೆ ಕಾಫಿ ಸಮಯ ದೂರದಿಂದ ಕಾಫಿ ಟ್ರಾಲಿ ಬರುತ್ತಿತ್ತು. ಅದು ಹೇಗೋ ನಮ್ಮ ಕಾರ್ಮಿಕರ ನಾಸಿಕಕ್ಕೆ ಆ ಸುಗಂಧ ಬಡಿದು ಎಲ್ಲರೂ ಚುರುಕಾದರು. ನನ್ನ ಬವಣೆ ಜಾಸ್ತಿ ಆಯಿತು. ಬಾಗಿಲು ಮುಚ್ಚಿ-ದ್ದಾಗ ಕಾಫಿ ಟ್ರಾಲಿ ಬಂದರೆ ದೇವರೇ ಗತಿ ಯಾರೂ ಕಾಫಿ ಸಮಾರಾಧನೆ ಮುಗಿಸಿ, ಬೀಡಿ ಸಿಗರೇಟ್ ಸೇವನೆ ಮುಗಿದು ಲ್ಯಾವೇಟರಿ ಸಂದರ್ಶನ ಆಗುವ ವರೆಗೆ ಡಿಪಾರ್ಟ್‌ಮೆಂಟ್ ಹೊಗುವುದಿಲ್ಲ. ಒಬ್ಬ 8–10ಕ್ಕೆ ಬಂದವ ಒಂದು ಪೇಪರ್ ಹಿಡಿದು "7-25ಕ್ಕೆ ಹಾಜರ್ ಬಂದವರು" ಎಂದು ಒಕ್ಕಣೆಮಾಡಿ, ತಾನು ಮೊದಲು ರುಜು ಹಾಕಿ ಬೇರೆಯವರು ರುಜು ಗಿಟ್ಟಿಸಿ ನನಗೆ ಒಪ್ಪಿಸಿದ. ನನ್ನ ಮುಜುಗರ ಅತಿಯಾಯಿತು. MD ಬರುವ ಟೈಂ. ಅವರು ಈ ಗುಂಪು ನೋಡಿದರೆ ಗತಿ ಏನಪ್ಪಾ ಎಂದು ಗಾಬರಿ. ಎಕ್ಸಪ್ಲನೇಷನ್ ಕೇಳುವ ತಾಳ್ಮೆ ಬೇಕಲ್ಲಾ ಅವರಿಗೆ! ನನ್ನ ದೃಷ್ಟಿ ಆ ಕ್ಷಣದಲ್ಲಿ ಹೆಲ್ಪರ್ ರಾಯಣ್ಣನ ಮೇಲೆ ಬಿತ್ತು. ಅವನು ನನ್ನ ಅಪದ್ಬಾಂದವ, ಹಾಯಾಗಿ ಕೂತು ಬಿಡಿ ಸೇದುತ್ತಿದ್ದ ಹತ್ತಿರ ಹೋದೆ. ರಾತ್ರಿ ಸೇವಿಸಿದ ಎಣ್ಣೆ ವಾಸನೆ ಬಡಿಯಿತು. ಸಹಿಸಿದೆ! (ಎಷ್ಟೋ ಸಲ ಶನಿವಾರ ಸಂಜೆ ನಾನೇ ಅವನಿಗೆ ಮಾಮೂಲು ಕೊಟ್ಟಿಲ್ಲವೇ? ಇಲ್ಲದಿದ್ದರೆ ಅವನ ಕೊ-ಆಪರೇಷನ್ ಬೇಕಲ್ಲಾ ಮುಂದಿನವಾರ. ಅವನೇ ಡಿಪಾರ್ಟ್ ಮೆಂಟ್ ಮುಖ್ಯಸ್ಥ "ತೇನವಿನಾ ತೃಣಮಪಿನಚಲತಿ" ಅವನು ಸಾಮಾನು ಒಂದು ಮೆಷಿನ್ ಇಂದ ಇನ್ನೊಂದಕ್ಕೆ ಸಾಗಿಸಿದರೆ ಮಾತ್ರ ಮುಂದಿನ ಕೆಲಸ ಸಾಧ್ಯ, ಇಲ್ಲವೇ ಆ ಕೆಲಸ-ಗಾರರು ಕಕ್ಕಸ್ ಮನೆ ಕಡೆ ಪ್ರಯಾಣಿಸುವರು! ಆಗ ನಾನು ಮತ್ತು ಗ್ರೂಪ್ ಲೀಡರ್‌ಗಳು ಆ ಕೆಲಸ ಮಾಡಬೇಕು! ಹಾಗಾಗಿ ರಾಯಣ್ಣನಿಗೆ ನಾವು ಲೂಬ್ರಿಕೇಟ್ ಮಾಡಿ, (ಅರ್ಥಾತ್ ಎಣ್ಣೆಹುಯಿದು) ಸ್ಮೂತ್ ಆಗಿಟ್ಟಿದ್ದೇವೆ. ಇದೊಂದು ತರಹ ಮ್ಯೂಚುಯಲ್ ಇಂಟರ್ ಡಿಪೆಂಡೆನ್ಸ್).

ರಾಯಣ್ಣ ನನ್ನ ದೈನ್ಯಮುಖನೋಡಿ ಅಭಯ ಹಸ್ತನೀಡಿ, ಜೇಡಿ ಕೊಸೆ ಎರಡು ಮಂ ಎಳೆದು, ಕಾಲಲ್ಲಿ ಹೊಸಕಿ "ಯಂತ್ರ ಅಭಿಯಂತರ ವಿಭಾಗ"ಕ್ಕೆ (ಪ್ಲಾಂಟ್ ಇಂಜಿನಿಯರಿಂಗ್) ಧಾವಿಸಿದ. ಎರಡುನಿಮಿಷದಲ್ಲಿ ಶಸ್ತ್ರಾಯುಧ ಪಾಣಿಯಾಗಿ (ಬೋಲ್ಟ್‌ಕಟರ್) ಪ್ರತ್ಯಕ್ಷನಾಗಿ ಬಂದು ಒಂದು ಸೆಕೆಂಡ್‌ನಲ್ಲಿ ಬೀಗತುಂಡರಿಸಿದ. ನಾನು ಆವನು ಸೇರಿ ಬಾಗಿಲು ತಗೆದವು. ಇಲ್ಲದ ಮನಸ್ಸಿನಲ್ಲಿ ಎಲ್ಲರು ನಿಧಾನವಾಗಿ ಒಳಗೆ ಬರಲು ಶುರು ಮಾಡಿದರು. ಕೆಲವರನ್ನು ಎಬ್ಬಿಸಿ ಬಲವಂತವಾಗಿ ಒಳಗೆ ತೂರಬೇಕಾಯಿತು. ಸಧ್ಯ ಕಾಫಿ ಟ್ರಾಲಿ ಬರುವಷ್ಟರಲ್ಲಿ ಎಲ್ಲರೂ ಒಳಹೊಕ್ಕರು. ಅಷ್ಟರಲ್ಲಿ ಸರಿಯಾದ ಕೀ ಹಿಡಿದು ವಾಚ್‌ಮನ್ ಪ್ರತ್ಯಕ್ಷನಾದ! "ಏನ್ ಸಾರ್! ನಾನು ಬರುವಷ್ಟರಲ್ಲಿ ಬೀಗ ಒಡೆದ್ದೀರಿ! ರಿಪೋರ್ಟ್ ಮಾಡ್ತೀನಿ" ಎಂದು ಮುರಿದ ಬೀಗ ವಶಪಡಿಸಿಕೊಂಡು, ಮುಖ ಊದಿಸಿಕೊಂಡು, ಸೈಕಲ್ ತುಳಿದ. ನಾನು ನನ್ನ ಮೇಜಿಗೆಹೋಗಿ ರಾಯಣ್ಣ ಕಾಫಿ ಕಪ್ ಹಿಡಿದು ಬರುವ್ರದನ್ನೇ ಎದುರು ನೋಡುತಿದ್ದೆ. ಅಷ್ಟರಲ್ಲಿ ಫೋನ್ ಟ್ರಿಂಗಿಸಿತು. "WM ಕರೀತಿದ್ದಾರೆ. ಕೂಡಲೇ ಬನ್ನಿ ಎಂದು ವರ್ಕ್ಸ್ ಮ್ಯಾನೇಜರ್ PA ಹೇಳಿದರು. ಏನಪ್ಪಾ ಇನ್ನೂ ಕಾಫಿಆಗಿಲ್ಲ. ನಿನ್ನೆ ರಾತ್ರಿ ಪ್ರೊಡಕ್ಷನ್ ನೋಡಿಲ್ಲ. ಇಷ್ಟ ಬೇಗನೇ ಬುಲಾವ್ ಏಕೆ ಎಂದು ಯೋಚಿಸಿ, ಕೈಗೆ ಸಿಕ್ಕಿದ ಫೈಲ್ ಹಿಡಿದು, ಕಾಫಿ ವಂಚಿತನಾಗಿ ಹೊರಟೆ ಕಾಫಿ ಸಮಾರಾಧನೆ ಇನ್ನೂ ನಡೀತಿತ್ತು. ಯಾವ ಮೆಷಿನ್‌ಗಳೂ ಸ್ಟಾರ್ಟ್ ಆಗಿರಲಿಲ್ಲ. 8–50ರ ಸಮಯ. "ವೆಂಕಟರಮಣ ನೀನೇಕಾಪಾಡು" ಎಂದು ಪ್ರಾರ್ಥಿಸಿ WM ಆಫಿಸ್ ಕಡೆ ಹೊರಟೆ. ಅವರ PA ನನ್ನಕಡೆ ಕೃಪಾ ಪೂರಿತ ದೃಷ್ಟಿ ಹಾಯಿಸಿದರು. ಏನೋ ಅನಾಹುತ ಕಾದಿದೆ ಎಂದು ಬಾಗಿಲು ಸ್ವಲ್ಪ ತೆರೆದು "ಮೆ ಐ ಕಂ ಇನ್ ಸಾರ್" ಎಂದ ಹೋಗಿ ಒಳಗಿದ್ದವರನ್ನು ಅವಲೋಕಿಸಿದೆ. ಸೆಕ್ಯೂರಿಟಿ ಆಫಿಸರ್ ನೆಟ್ಟಗೆ ಕುರ್ಚಿಯಲ್ಲಿ ಕುಳಿತಿದ್ದರು. ವಾಚಮನ್ ಅಟೆಂಶನ್ ಧಾಟಿಯಲ್ಲಿ ನಿಂತಿದ್ದ ಮುರಿದ ಬೀಗ ನನ್ನ ಅಪರಾಧವನ್ನು ಸಾಬೀತು ಮಾಡುವಂತೆ ಟೇಬಲ್ ಮೇಲೆ ಪವಡಿಸಿತ್ತು.

ಸೆಕ್ಯೂರಿಟ್ ಆಫೀಸರ್ ನಿವೃತ್ತ ಸೈನಿಕ, ಎರಡನೇ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ. ಅವರಿಗೆ ಶಿಸ್ತು ಬಹಳ ಮುಖ್ಯ. "ಬಾಡ್ ನ್ಯೂಸ್ ಟ್ರಾವಲ್ಸ್ ಫಾಸ್ಟ್. ಗುಡ್ ನ್ಯೂಸ್ ಡೈಸ್ ವೇರ್ ಇಟ್ ಸ್ಟಾರ್ಟ್ಸ್ ಎಂಬ ನಾಣ್ಣುಡಿ ನಿಜವಾಯಿತು. ಸುಮ್ಮನೆ ಕುರ್ಚಿ ಎಳೆದು ಕೂತೆ.

WM ಸ್ವಲ್ಪ ಹೊತ್ತು ಸುಮ್ಮನಿದ್ದರು. ಕೋಣೆಯಲ್ಲಿ ಸೆಕ್ಯೂರಿಟಿ ಆಫಿಸರ್‌ರ ದೀರ್ಘ ಉಸಿರಾಟದ ಶಬ್ದದ ಹೊರತು ಏನೂ ಶಬ್ದವಿರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ WM ಗುಡುಗಿದರು "ಏನ್ರಿ ಮಿಸ್ಟರ್ .... ನಿಮ್ಮ ಇಂಜಿನಿಯರಿಂಗ್

ಕಾಲೇಜಿನಲ್ಲಿ ಬೀಗ ಒಡೆಯುವ ಸಬ್ಜೆಕ್ಟ್ ಬೇರೆ ಇತ್ತೇನ್ರಿ? ಆದರಲ್ಲಿ ನಿಮಗೆ ಫಸ್ಟ್ ಕ್ಲಾಸ್ ಬಂದಿರಬೇಕಲ್ಲವೆನ್ರೀ" ಎಂದರು. ಅವರ ಸ್ವಭಾವ ನನಗೆ ಚನ್ನಾಗಿ ಗೊತ್ತು. "ಸೀಗೆಯೊಳಗಣ ಬಾಳೆಯಂದದಿ" ಹೊರಗೆ ಒರಟು. ಒಳಗೆ ಮೃದು. ಸುಮ್ಮನಿದ್ದೆ. ಸೆಕ್ಯೂರಿಟಿ ಆಫೀಸರ್ ಹೇಳಿದರು. "ಸಾರ್ ಕೀ ತರೋ ಅಷ್ಟರಲ್ಲಿ ಈ ಕೆಲಸ ನಡೆದಿದೆ"

W M ನನ್ನ ನಿರುತ್ತರದಿಂದ ಇನ್ನೂ ಉದ್ರಿಕ್ತರಾದರು. "ಏನ್ರೀ ನಿಮ್ಮ ಎಕ್ಸ್‌ಪ್ಲನೇಶನ್ ? Chargesheet ಕೊಡಲೇನ್ರೀ" ಎಂದು ಹೆಂಚು ಹಾರುವಂತೆ ಗುಡುಗಿದರು. ನಾನು ಮೆತ್ತಗೆ ಹೇಳಿದೆ "ಸಾರ್ ಮೊನ್ನೆ ಸೋಮವಾರ ಟ್ರೈನಿಂಗ್ ಸೆಂಟರ್‌ನಲ್ಲಿ ನಿಮ್ಮ ಲೆಕ್ಚರ್ ಇತ್ತಲ್ಲಾ ಸಾರ್, ಎಲ್ಲಾ ಇಂಜಿನಿಯರ್‌ಗಳನ್ನು ಉದ್ದೇಶಿಸಿ" ಎಂದು ಶುರುಮಾಡಿದೆ. ಅವರೆಂದರು "ನಾನು ಬೀಗ ಒಡೆಯಿರಿ ಎಂದು ತಾಕೀತು ಮಾಡಿದಿನೇನ್ರಿ ? ಏನ್ರೀ ನೀವು ಹೇಳೋದು ? ನನಗೇ ತಂದಿಡುತ್ತಿದ್ದೀರಲ್ಲಾ"

"ಹಾಗಲ್ಲ ಸಾರ್...... ಎಂದು ಹೇಳುವಷ್ಟರಲ್ಲಿ "ಇನ್ನು ಹೇಗೆ" ಎಂದರು. ನಾನು ಈಗ ಯೋಚಿಸಿದೆ. "ಧೈರ್ಯಂ ಸರ್ವತ್ರ ಸಾಧನಂ, ಸ್ವಲ್ಪ ಧೈರ್ಯ ತಂದು ಕೊಂಡು ಹೇಳಿದೆ "ನೀವೇನು ಬೀಗ ಒಡೆಯಲು ಹೇಳಿಲ್ಲ ಸಾರ್ ಆದರೆ...... ಎನ್ನುವಷ್ಟರಲ್ಲಿ "ಸಧ್ಯ ನನ್ನನ್ನು ಬಿಟ್ಟಿರಲ್ಲಾ" ಎಂದರು.

ನಾನೆಂದೆ "ನೀವು ಮ್ಯಾನ್ ಅವರ್ Utilisation ಮೇಲೆ ಭಾಷಣ ಮಾಡಿದಿರಿ ಸಾರ್ ಹೇಗೆ ಮ್ಯಾನ್ ಅವರ್ ಅತ್ಯಮೂಲ್ಯವಾದ ಸ್ವತ್ತು, ಅದನ್ನು ಕಂಪನಿ ಒಳಿತಿಗೆ ಉಪಯೋಗಿಸಿಕೊಳ್ಳುವುದು ಎಲ್ಲಾ ಇಂಜಿನಿಯರ್‌ಗಳ ಕರ್ತವ್ಯ. ಅದನ್ನು ಪೋಲುಮಾಡಬಾರದು .... ಎಂದು ಹೇಳುವಷ್ಟರಲ್ಲಿ, ಆವರು ಗುಡುಗಿದರು "ಬೀಗ ಮುರಿಯೊದಕ್ಕೂ, ನನ್ನ ಲೆಕ್ಚರ್‌ಗೂ ಏನ್ರೀ ಸಂಬಂಧ. ರಾತ್ರಿ ಎಲ್ಲಿಗೆ ಹೋಗಿದ್ರಿ ?.

"ಸಂಬಂಧ ಇದೇ ಸಾರ್, ಈ ಸೆಕ್ಯುರಿಟಿ ಆಫೀಸರ್ ಬೀಗ ಮುರಿದದ್ದು ಹೇಳಿದ್ದಾರೆ, ನೂರು ಜನ ಕೆಲಸಗಾರರು ಒಂದು ಘಂಟೆ ಡಿಪಾರ್ಟ್‌ಮೆಂಟ್ ಆಚೆ ಕೂತಿದ್ದು ಮುಚ್ಚಿಟ್ಟಿದ್ದಾರೆ. ನೂರು ಮ್ಯಾನ್ ಅವರ್ ಬೆಲೆ ಎಷ್ಟು, ಒಂದು ಬೀಗದ ಬೆಲೆ ಎಷ್ಟು ಸಾರ್" ಎಂದೆ. (ಕೆಲಸಗಾರರು ಇನ್ನೂ ಕಾಫಿ ಹೀರುತ್ತಿದ್ದುದು ಹೇಳಲಿಲ್ಲ !)

ನಮ್ಮ WM ಹಾಸ್ಯ ಪ್ರಿಯರು. ಅವರಿಗೆ ನಗು ತಡೆಯಲಾಗಲಿಲ್ಲ, ತಿರುಗು ಕುರ್ಚಿ ತಿರುಗಿಸಿ ನಮ್ಮ ಕಡೆ ಬೆನ್ನುಮಾಡಿ ಕಿಟಕಿ ಆಚೆನೋಡ ತೊಡಗಿದರು. ಅವರು ನಗುತ್ತಿದ್ದುದು ನನಗೆ ಚೆನ್ನಾಗಿ ಕಾಣಿಸಿತು !

ಸೆಕ್ಯುರಿಟಿ ಆಫೀಸರ್ ಆವೇಶದಿಂದ "ಸಾರ್ ಇಂದೊಂದು ಮ್ಯಾಟರ್ ಆಫ್ ಪ್ರಿನ್ಸಿಪಲ್... ಎಂದು ಹೇಳುತ್ತಿರುವಂತೆ WM ಕೇಳಿದರು "ಕಾಫಿ ಆಯ್ತೇನ್ರೀ" ಅಂತ. "ಇಲ್ಲ ಸಾರ್. ನೀವು ಕರಿದಿರಿ ಬಂದು ಬಿಟ್ಟೆ" ಎಂದೆ. ಅವರ PAಗೆ ಕಾಫಿ ತರಲು ಹೇಳಿ, ಕುರ್ಚಿತಿರುಗಿಸಿ, ನಮ್ಮನ್ನು ನೋಡುತ್ತ ಹೇಳಿದರು" ನೋಡ್ರಿ ಈ ಬೀಗವನ್ನು ಬೆಸುಗೆಹಾಕಿ ಸೆಕ್ಯುರಿಟಿಗೆ ಕೊಟ್ಟುಬಿಡಿ. ಇನ್ನುಮುಂದೆ ಬೀಗ ಒಡೆಯುವ ಮುಂಚೆ ನನ್ನ ಪರ್ಮಿಶನ್ ತೊಗೋಳಿ, ಅಂದಹಾಗೆ ನಿನ್ನೆ ಪ್ರೊಡಕ್ಷನ್ ಏನಾಯಿತು," ಎಂದು ಮುಂದುವರಿಸಿದರು,

ಸೆಕ್ಯುರಿಟಿ ಆಫಿಸರ್. ವಾಚ್‌ಮನ್ ಎಣ್ಣೆ ಕುಡಿದವವರಂತೆ ಮುಖಮಾಡಿ. WMಗೆ ಸೆಲ್ಯೂಟ್ ಹಾಕಿ ನಿರ್ಗಮಿಸಿದರು. ನಾನು ಗುರುರಾಯರನ್ನು ಮನಸ್ಸಿನಲ್ಲೆ ವಂದಿಸಿ, ಪ್ರೊಡಕ್ಷನ್ ರಿಪೋರ್ಟ್ ಬಿಚ್ಚಿದೆ!

ಗರಡಿ ಮನೆ

ನನ್ನ ಮನೆ
ಅಂದರೆ ಒಂದು
ರೀತಿ ಗರಡಿ ಮನೆ
ಇಲ್ಲಿ ನನಗೂ ನನ್ನಕೆಗೂ
ಸದಾ
ಜಗಳ, ಕದನ !

— ಪ್ರಭಾ

ಸರ್ಕಸ್‌ನಲ್ಲಿ ಒಂದು ಸಂಜೆ

ಪ್ರಕಾಶ್

'ಅಣ್ಣ, ಸರ್ಕಸ್ ಬಂದಿದೆ, ಹೋಗೋಣ ಅಂತ ಮಕ್ಕಳು ಗೋಗರೆದವು 'ಈ ವಯಸ್ಸಿನಲ್ಲಿ ಏನ್ ಸರ್ಕಸ್ಸೋ, ನೋಡಿದೋರು ನಗ್ತಾರೆ' ಎಂದ. 'ಇಲ್ಲ ಅಣ್ಣ, ಚಾರ್ಲೀನ ನೋಡಿ ನಗ್ತಾರೆ ! ಅಂತ ಅಂದ ಅರುಣ. ಇನ್ನು ಮುಂದೆ ಮಾತಾಡೋದು ಅಭಾಸ ಅಂತ ಕೋಟು ಧರಿಸಿ ಟಿಕೆಟ್ ಕೊಳ್ಳಕ್ಕೆ ಹೊರಟೆ.

ಸರ್ಕಸ್ ಡೇರೆ ಸುತ್ತ ಗಲಿ ಬಿಲಿ, ಧೂಳು, ಕಡ್ಲೆ ಕಾಯಿ, ಕಾಟನ್ ಕ್ಯಾಂಡಿ ಇತ್ಯಾದಿ. ಟಿಕೆಟ್ ತೋರಿಸಿ ಒಳಗೆ ನಡೆದವು. ಪಕ್ಕದಲ್ಲಿ ಆನೆಗಳು ಆಕಳಿಸುತ್ತ ನಿಂತಿದ್ದವು. ನಂ ಹೈಸ್ಕೂಲ್ ಕೆಮಿಸ್ಟ್ರಿ ಮೇಷ್ಟರ ನೆನಪು ಬಂತು. ಅವರು ಯಾವಾಗ್ಲೂ ಬೈತಾ ಇದ್ರು ನಮ್ಮನ್ನ. 'ಏನೋ ಆನೆ ತರಹ ಆಕಳಿಸ್ತೀಯ ? ನನ್ ಲೆಕ್ಚರ್ ಅಷ್ಟು ಬೋರೇನೋ ?.' .ಈ ಆನೆಗಳಿಗೆ ಯಾಕೆ ಬೋರು? ನಮ್ಮಂಥ ಪ್ರಾಣಿಗಳನ್ನ ದಿನಾ ನೋಡಬೇಕು ಅಂತಲೇನೋ ?

ಮೊದಲನೇದೇ ಫ್ಲೈಯಿಂಗ್ ಟ್ರಪೀಸ್. ನಡುಗಾಳೀಲಿ ಒಬ್ಬಳು ಉಯ್ಯಾಲೆ ಕೈಬಿಟ್ಟು ಇನ್ನೊಬ್ಬನ ಕೈಸೇರೋ ಚಮತ್ಕಾರ, ದೀಪ ಎಲ್ಲ ಆರಿಸಿ ಬಿಟ್ಟು ನೀಲಿ ದೀಪದಲ್ಲಿ ಅದು ಹೇಗೆ ಹಾರಾಡ್ತಿರೋ ? ಆದರೆ ಪ್ರಾಕ್ಟೀಸ್ ಟೈಂ ನಲ್ಲಿ ಕರೆಂಟ್ ಕೈಕೊಟ್ಟು, ಕತ್ತಲೇಲೂ ಒಬ್ಬರ ಕೈ ಮಿಸ್ ಆಗೊಲ್ಲ ಅಂತ ಅರುಣ ವ್ಯಾಖ್ಯಾನಿಸಿದ, ಸುಮ್ನಿರೋ ತಲೆಹರಟೆ ಅಂದೆ ಪಕ್ಕದಲ್ಲಿ ಯಾರಾದ್ರೂ ಕೆ.ಇ.ಬಿ. (ಕೆ.ಜಿ.ಬಿ ಅಲ್ಲ !) ನೋರು ಇದ್ರೆ ಏನು ಗತಿ ?

ಜಗ್ಲರ್ ಒಬ್ಬ ಓಡಿಬಂದ. ಕೈಯಲ್ಲಿ ತಟ್ಟೆ ಬಟ್ಟಲು ಜಗ್ಲತ್ತ ಓಡಾಡಿದ ಇದೇನುಮಹಾ, ನಂ ಗಣೇಶಭವನದ ಮಾಣಿಗಳು ಐದಾರು ತಟ್ಟೆ ಲೋಟಗಳನ್ನ ತಿಂಡಿ ಸಮೇತ ಸರ್ಕಸ್‌ಗಿಂತ ಚಾಕಚಕ್ಯತೆಯಿಂದ ತೋರಿಸ್ತಾರೆ ದಿನಾ, ಅಂದು ಕೊಂಡೆ,

ಒಂದು ದೊಡ್ಡ ಆನೆ ಬಂತು, ನಿಧಾನವಾಗಿ ಗಜ-ಗಂಭೀರ ಅಂತ ಏಕೆ ಹೇಳ್ತಾರೆ, ಅಂತ ಈಗ ಅರ್ಥವಾಯ್ತು, ಒಂದು ದೊಡ್ಡ ಗೋಳದಮೇಲೆ ನಾಲ್ಕು ಕಾಲುಗಳನ್ನೂ ಜಾಗ್ರತೆಯಿಂದ ಇರಿಸಿ ಮುಂದು ವರೀತು ! ಮಕ್ಕಳೆಲ್ಲ ಚಪ್ಪಾಳ

ನನಗೆ ನಂ ನರಸಿಂಹರಾಯರ ನೆನಪು ಬಂತು. ಆತನೂ ಪಾಪ ಹೀಗೇ ಜನರ ಒತ್ತಾಯಕ್ಕೆ ಬ್ಯಾಲೆನ್ಸಿಂಗ್ Act ಮಾಡ್ತಾ ಇದಾನೆ ಅಂತ ಅನ್ಕೊಂಡೆ. ಆದರೆ ಒಂದೇ ವ್ಯತ್ಯಾಸ. ಆನೆ ಬಹಳ ಭದ್ರವಾಗಿ ಕಾಣಿಸ್ತು!

ರೈಫಲ್ ಹಿಡಿದುಕೊಂಡು ಇಬ್ಬರು ಧಡೂತಿ ಸ್ತ್ರೀಯರು ಬಂದರು. ಅಮೇರಿಕಾದ ವೈಲ್ಡ್ ವೆಸ್ಟನ ಕೌಬಾಯ್‌ಗಳ ತರಹ ವೇಷ! ಸುಮಾರು 90 ಕೆ. ಜಿ. ಆದರೂ ಇದ್ರು (ಒಬ್ಬರು, ಇಬ್ಬರೂ ಸೇರಿ ಅಲ್ಲ!) ದೂರದಲ್ಲಿ ಬೆಲೂನ್ ತಗಲು ಹಾಕಿ ಗುಂಡು ಹಾರಿಸಿ ಒಡೆಯೋದು. ಒಬ್ಬಳು ಎಡಗೈಯಲ್ಲಿ ಕನ್ನಡಿ ಹಿಡಿದು ಬೆಲೂನ್‌ನ ಪ್ರತಿಬಿಂಬ ನೋಡ್ತಾ ಶೂಟ್‌ಮಾಡಿದಳು. ಅರ್ಜುನ ಮತ್ಸ್ಯಯಂತ್ರ ಭೇದಿಸಿದ್ದು ಹೀಗೆತಾನೆ! ಆದರೆ ಈ ಭಾರೀ ಆಕಾರನ ಯಾವ ಎದೆಗಾರ ವರಿಸ್ತಾನೋ ಅಂತ ಯೋಚನೆ ಸುಳಿದು ಹೋಯಿತು. ಅವೇನೇನಾದರೂ ಎದುರುತ್ತರ ಕೊಟ್ಟರೆ ಕೈಲಿ ರೈಫಲ್ ಬೇರೆ!

ಜಾದೂಗಾರ ಬಂದ. ಒಂದು ಖಾಲೀ ಬೋನು ಎಳೆದು ತಂದರು. ಜಾದೂಗಾರ ಅದರೊಳಕ್ಕೆ ಒಬ್ಬ ಚೆಂದೊಳ್ಳಿ ಚಲುವೆಯನ್ನು ತಳ್ಳಿದ. ಬೋನಿನ ಮೇಲೆ ಒಟ್ಟೆ ಹೊದ್ದಿಸಿದರು. ಸರ್ಕಸ್ ಬ್ಯಾಂಡು ಜೊರಾಗಿ ಬಾಜಾಯಿಸಿತು. ಹಾಂ, ಹೂಂ ಅಂತ ಕೂಗುತ್ತಾ ಜಾದೂಗಾರ ಒಟ್ಟೇನ ಎಳೇದ ಬೋನಿನ ಒಳಗೆ ಯುವತಿ ಸುಳಿವೇ ಇಲ್ಲ!! ಒಂದು ದೊಡ್ಡ ಆಲ್ಸೇಷಿಯನ್ ನಾಯಿ! ಚಪ್ಪಾಳೆಗಳ ಸುರಿಮಳೆ! ನನಗೆ ಮರುಕ ಉಂಟಾಯಿತು. "ಅಲ್ಲ, ಜಾದೂಗಾರರೆಲ್ಲ ಇಷ್ಟು ಮಂಕರೇ?" ಅಂದೆ. "ಯಾಕೆ?" ಅಂದಳು ಶೋಭಾ. "ಅಲ್ಲ, ನಾಯೀನ ಚಲುವೆ ಮಾಡೋದು ಬಿಟ್ಟು ಅಂದೆ!

ಇಷ್ಟು ಹೊತ್ತೂ ಅಚ್ಚ ಕನ್ನಡದಲ್ಲಿ ಕಾಮೆಂಟ್ರಿ ಹೇಳ್ತಾ ಇದ್ದ ಒಬ್ಬ. 'ಮಹಿಳೆಯರು ಅಬಲೆಯರು ಅಂತ ಹೇಳ್ತಾರಲ್ಲ, ಅದು ಶುದ್ಧ ಸುಳ್ಳು ಅಂತ ನಿಮಗೆಲ್ಲ ತೋರಿಸ್ತೀವಿ' ಅಂದ, ಮ್ಯಾನೇಕಾಧಿಪತಿ. ಒಬ್ಬಳು ಭಾರೀ ಮಹಿಳೆ ನಿಧಾನವಾಗಿ ನಡೆದು ಬಂದಳು. ಅವಳ ಸೈಜು ನೋಡಿ, ಇತರ ನೌಕರರೆಲ್ಲ ಯಾಕೆ ಸಣ್ಣಗೆ ಇದಾರೆ ಅಂತ ಅರ್ಥ ಆಯ್ತು ನಂಗೆ! ಅವಳ ಹಿಂದೇನೇ ಆನೆ ಅವಳ ತರಹಾನೆ ಮಂದ ಗಜ ಗಮನೆ! ಮಹಿಳೆ ನೆಲದ ಮೇಲೆ ಮಲಗಿದಳು. ಹೊಟ್ಟೆಮೇಲೆ ಒಂದು ಬೋರ್ಡು, ಹಾಸಿಗೆ ಮೆತ್ತೆ. ಆನೆ ನಿಧಾನವಾಗಿ ನಡೆದು ಒಂದು ಅವಳ ಮೇಲೆ ಹಾದು ಹೋಯಿತು. ನಾನು ಉಸ್ಸಪ್ಪ ಅಂದೆ. ಅಲ್ಲ ತೂಕ ಇಳಿಸೋದಕ್ಕೆ ಈಕೆಗೆ ಇನ್ನ್ಯಾವ ಸುಲಭ ಮಾರ್ಗ ಇಲ್ಲವೇ? ಅಂತ ದುಃಖಪಟ್ಟೆ. ಅರುಣ್

ಕೇಳಿದ. ನೀನು ಮಾಡ್ತೀಯ ಅಣ್ಣ ಈ ಸಾಹಸ ? ಅಂತ ರೇಗಿಸಿದ. ಓಹೋ ಅದಕ್ಕೇನು ? ಆ ಆನೇನ ಅಲ್ಲಿಂದ ತೆಗಿಸು, ನಾನೂ ಮಾಡ್ತೀನಿ ಟ್ರಿಕ್ಕು ಅಂದೆ. ಸುಮ್ಮನಾದ !

ಇನ್ನೊಬ್ಬಳು ಯುವತಿ ಟೇಬಲ್ ಮೇಲೆ ಮಲಗಿ, ಕಾಲಿನ ಮೇಲೆ ಒಂದು ಗಳು ಇಟ್ಟುಕೊಂಡಳು. ಅದರ ಕೊನೇಲಿ ಒಂದು ಬುಟ್ಟಿ ಒಂದು ಬಾಸ್ಕೆಟ್ ಬಾಲನ್ನ ಕಾಲಿಂದಲೇ ಎಗರಿಸಿ ಮಧ್ಯೆ ಮಧ್ಯೆ ಇದ್ದ ಪ್ಲೇಟ್ ಗಳಿಗೆ ಹಾರಿಸುತ್ತ ಬಂದಳು. ಕೊನೆಗೆ ಬಾಲ್ ಬಾಸ್ಕೆಟ್‌ಗೆ ಬಿತ್ತು. ಇವಳನ್ನ ನಂ ಭಾರತದ ಬಾಸ್ಕೇಟ್ ಬಾಲ್ ಟೀಂ ಗಾರೂ ಸೇರಿಸಬಹುದು. ಕಾಲಲ್ಲೇ ಇಷ್ಟು ಸಾಧಿಸಿದಾಳೆ, ಇನ್ನು ಕೈಯಲ್ಲಿ ಏನು ಮಾಡ್ತಾಳೋ ಅನ್ನಿಸಿತು.

ಉಪ್ಪೇರಿ ಖಾರವಾಗಿತ್ತು. ನೀರು ಎಲ್ಲೂ ಸಿಗೋ ಹಾಗಿಲ್ಲ. ಹುಲಿ ಸಿಂಹಗಳು ಬರೋಹೊತ್ತಿಗೆ ಇನ್ನೂ ಹೊರಗೆ ದೊಂಬಿ ಆಗುತ್ತೆ ಅಂತ ಹೊರಗಿನ ತಂಪು ಗಾಳಿಗೆ ಬಂದೆವು.

ಜಾಗವೆಲ್ಲಿ ?

ಕೈ ಹಿಡಿಯೋ
ಹುಡುಗಿ
ಎನ್ನುತ್ತೀಯಲ್ಲಾ
ಹೇಗೆ ಹಿಡಿಯಲಿ
ಅಲ್ಲಿ ಇಸ್ಪೀಟು ಎಲೆ
ವಿಸ್ಕಿ ಬಾಟಲಿ
ಇದೆಯಲ್ಲ !

— ಚಂಚಲ ವೇಣು

ತಿರುಗು ಬಾಣ

ಕಂ. ಭಂ. ಕೃಷ್ಣ ಮೂರ್ತಿ

ಮುನಿಸಿಪು ಕೋರ್ಟಿನ ಕಾಪಿಯಿಂಗ್ ಶಾಖೆಯ ಎಗ್ಸಾಮಿನರ್ ವೆಂಕಪ್ಪಯ್ಯನಿಗೂ ಎಗ್ಸಿಕ್ಯೂರ್ಷ ಗುಮಾಸ್ತ ನರಸಿಂಹಯ್ಯನಿಗೂ ಸ್ನೇಹ ಸಂಭಂದ ಕಡಿದು ಹೋಗಲು ಬಲವಾದ ಕಾರಣವಿತ್ತು. ಒಂದು ಬಾರಿ ಕಕ್ಷಿಗಾರರೊಬ್ಬರು, "ಎಗ್ಸಿಕ್ಯೂಷನ್ ನಂಬರ್ ಮುವತ್ತೊಂದರ ಆರ್ಡರ್ ಕಾಪಿ ಅರ್ಜೆಂಟಾಗಿ ಬೇಕು ಸ್ವಾಮಿ ಸಂಜೆಹೊತ್ತಿಗೆ ರೆಡಿಮಾಡಿಕೊಡಿ" ಎಂದು ಹೇಳಿ ವೆಂಕಪ್ಪಯ್ಯನಿಗೆ ಮೂವತ್ತು ರೂಪಾಯಿಗಳ ದಕ್ಷಣೆಕೊಟ್ಟು ಹೋಗಿದ್ದರು. ಶಿರಸ್ತೆದಾರ ಶೀನಪ್ಪನವರಿಗೆ ದಾಯಭಾಗ ಹತ್ತುರೂಪಾಯಿ ಕೊಡದಿದ್ದರೆ. ಅವರು ಅದಕ್ಕೆ ಸಹಿಹಾಕದೆ ಕಾಡಿ ಸುತ್ತಾರೆಂಬುದನ್ನು ತಿಳಿದಿದ್ದ ವೆಂಕಪ್ಪಯ್ಯ ಆವರಿಗೆ ಸಲ್ಲಬೇಕಾದ ಹತ್ತುರೂಪಾಯಿ ಕಾಣಿಕೆಯನ್ನು ಸಲ್ಲಿಸಿ, ಮಿಕ್ಕ 20ರೂಗಳಲ್ಲಿ ಕಾಪಿಯಿಸ್ಟ್ ನಾರಣಪ್ಪನಿಗೆ ಐದು ರೂಪಾಯಿಕೊಟ್ಟು ಮಿಕ್ಕ ಹದಿನೈದು ರೂಗಳನ್ನು ಜೇಬಿಗಿಳಿಸುವ ಸನ್ನಾಹ ಮಾಡಿದ್ದರು. ಆದರೆ ಮೂತ್ತೊಂದನೆ ನಂಬರಿನ ಫೈಲು, ಎಗ್ಸಿಕ್ಯೂರ್ಷ ಗುಮಾಸ್ತ ನರಸಿಂಹಯ್ಯನ ಸುಫರ್ಧಿನಲ್ಲಿ ಇದುದರಿಂದ ಅವನ ತಲೆ ಸವರಿ ಫೈಲು ಗಿಟ್ಟಿಸಲು ದೇಶಾವರನಿಗೆ ಬೀರುತ್ತಾ ವಂಕಪ್ಪಯ್ಯ ಅವನ ಕೊರಡಿಗೆ ಬಂದರು.

"ನರಸಿಂಹಯ್ಯನೋರೆ ಸ್ವಲ್ಪ ಮೂವತ್ತೊಂದನೇ ನಂಬರ್ ಫೈಲು ಬೇಕಾಗಿತ್ತು. ದಯಮಿಟ್ಟು ಕೊಡಿ ದೇವರು. ಎಂದು ಅತೀ ನಮ್ರತೆಯಿಂದ ಕೇಳಿದರು. ಕೇವಲ ಐದೇ ವರ್ಷ ಸರ್ವಿಸಾಗಿದ್ದರು ಐವತ್ತು ವರ್ಷದ ಅನುಭವ ಪಡೆದವರ ಚಾಣಾಕ್ಷತನ ನರಸಿಂಹಯ್ಯನಲ್ಲಿತ್ತು.

"ಏನು ಸ್ವಾಮಿ ಫೈಲು ಅರ್ಜಂಟಾಗಿ ಬೇಕಿತ್ತೆ ? ಎಂದು ಕೇಳಿದ. ಅ ರ್ಜ ಂ ಟು ಎಂದರೆ ಅವನ ನಿಘಂಟಿನಲ್ಲಿ ಕ ಕ್ಷಿ ಗ ಳಿ ಂ ದ ಹಣಬಂದಿದೆ ಎಂದೇ ಲೆಖ್ಖಾಚಾರ. ಅರ್ಜಂಟೂಂತಂತ್ರೆ ಇನ್ನು ಆವನಿಗೆಲ್ಲಿ ಪಾಲು ಕಕ್ಕಬೇಕಾಗುತ್ತದೋ ಎಂದುಕೊಂಡು, ಅರ್ಜಂಟೇನಿಲ್ಲ ಸ್ವಾಮಿ. ಆದರೆ ಪಾರ್ಟಿ ಸಾಹೇಬರ ಕಡೆಯೋರು. ಅದಕ್ಕೇ ಬ್ಯಾಗ ಮಾಡಿಕೊಡಬೇಕು" ಅಂತ ವೆಂಕಪ್ಪಯ್ಯ

ಒಂದು ಹಸೀ ಸುಳ್ಳನ್ನು ಸರಾಗವಾಗಿ ಹೇಳಿದರು. ನರಸಿಂಹಯ್ಯ ಇದನ್ನೆಲ್ಲಾ ನಂಬಲು ಹೆಡ್ಡನೆ? "ಆಯ್ತು ಸ್ವಾಮಿ. ಮಧ್ಯಾಹ್ನ ಬನ್ನಿ ಹುಡುಕಿ ಕೊಡ್ತಿನಿ" ಅಂತ ತಣ್ಣಗೆ ಹೇಳಿದ." ಅಯ್ಯೋ ಹಾಗೆ ಹೇಳ್ಬೇಡಿ ದೇವ್ರು, ಕಕ್ಷಿಗಳ ಕೈಗೆ ನಾಲ್ಕು ಘಂಟೆಗೆಲ್ಲಾ ಕಾಪಿ ಕೊಡ್ಬೇಕು ಟೈಪುಮಾಡಿ, ಕಂಪೇರ್ ಮಾಡಿ, ಶಿರಸ್ತೆದಾರರ ಹಸ್ತಾಕ್ಷರ ಹಾಕಿಸಿ ಕೊಡ್ಬೇಕಾದ್ರೆ ಬಹಳಾ ಟೈಮಾಗುತ್ತೆ. ಆಗ್ಲೆ ಹನ್ನೆರಡು ಘಂಟೆ ಆಗೋಯ್ತು, ದಯವಿಟ್ಟು ಫೈಲನ್ನ ಈಗ್ಲೆ ಕೊಡಿ" ಎಂದು ಎಗ್ಸಾಮಿನರ್ ಸಾಹೇಬರು ದುಂಬಾಲು ಬಿದ್ದರು.

"ಅರರೆ ಆಗ್ಲೆ ಹನ್ನೆರಡು ಘಂಟೆ ಆಗೋಯ್ತೇ. ಒಂದು ಹನಿ ಕಾಫೀನೂ ಬಾಯಿಗೆ ಬಿದ್ದಿಲ್ವಲ್ಲಾ ತಾಳಿ, ಬೇಗ ಹೋಗಿ ಒಂದು ತೊಟ್ಟು ಕಾಫಿ ಕುಡಿದು ಬರ್ತೀನಿ ಅಂತ ಹೇಳಿ ಬೀರುವಿನ ಬಾಗಿಲಿಗೆ ಬೇಗ ತಗುಲಿಸಿ ನರಸಿಂಹಯ್ಯ ಹೊರಗೆ ನಡದೇ ಬಿಟ್ಟ, ಅವನು ಅರ್ಧ ಘಂಟೆಯಾದರೂ ಬರದಿದ್ದನ್ನ ಕಂಡು. ವೆಂಕಪ್ಪಯ್ಯ ವಿಲಿವಿಲಿ ಒದ್ದಾಡಿದರು. ಕಾಪಿಯಿಷ್ಟ್ ನಾರಣಪ್ಪ ತನ್ನ ಟೈಮಾಯ್ತೂಂತ ಮನೆಗೆ ಹೊರಟು ಹೋದರೆ ತನ್ನ ಗತಿಯೇನು? ಮೂವತ್ತು ರೂಪಾಯಿ ಕೊಟ್ಟ ಕಕ್ಷಿ, ಕೆಲಸವಾಗದಿದ್ದರೆ ಸುಮ್ಮನೆ ಬಿಡ್ತಾನೆಯೆ?" ಎಂದು ಚಿಂತಾಕ್ರಾಂತರಾದರು. ಶಿರಸ್ತೆ ಶೀನಪ್ಪನವರಿಗೆ ವಿಷಯವನ್ನು ತಿಳಿಸಲು ಅವರ ಕೊಠಡಿಗೆ ಓಡಿದರು.

ಈ ವೇಳೆಗೆ ಹಿಂದಿರುಗಿದ ನರಸಿಂಹಯ್ಯ ಮೂವತ್ತೊಂದನೇ ನಂಬರ್ ಫೈಲನ್ನು ಬೀರುವಿನಿಂದ ಹೊರತೆಗೆದು, ತನ್ನ ಕುರ್ಚಿಯಕೆಳಗೆ ಹಾಕಿಕೊಂಡು ಅದರ ಮೇಲೆ ಪುಷ್ಪವೂರಿ ಕುಳಿತ. ದಕ್ಷಿಣೆಯಲ್ಲಿ ಪಾಲು ಪಡೆದಿದ್ದ ಶಿರಸ್ತೇದಾರರು ಸಿಡಿಪಿಡಿ ಮಾಡಿಕೊಂಡೇ ಬಂದರು. "ಏನ್ರಿ ನರಸಿಂಹಯ್ಯ ಎಗ್ಸಾಮಿನರು ಫೈಲು ಕೇಳಿದ್ರೆ ಯಾಕ್ರೀ ಕೊಡೋಲ್ಲ?" ಅಂತ ಗಡುಸಾಗಿಯೇ ಕೇಳಿದರು.

"ಅಯ್ಯೋ ಇದೆಂಥಾ ಅಪವಾದ ಮಹಾಸ್ವಾಮಿ. ನಾನು ಫೈಲು ಕೊಡೋಲ್ಲಾಂತೇನ್ರೆ. ಅದೇನು ನನ್ನ ಪಿತ್ರಾರ್ಜಿತ ಆಸ್ತಿಯೆ. ಅದನ್ನ ಇಟ್ಟುಕೊಂಡು ಉಪ್ಪು ಕಾರ ಹಾಕಿಕೊಂಡು ನೆಕ್ಕಬೇಕೆ ಹೇಳಿ...ಎಂದು ದೊಡ್ಡ ಭಾಷಣವನ್ನೇ ಬಿಗಿಯಲು ಶುರು ಹಚ್ಚಿದ, "ನೀವೇ ಕೇಳಿ ಸ್ವಾಮಿ, ಎಗ್ಸಾಮಿನರ್ ಸಾಹೇಬರಿಗೆ ನಾನು ಏನು ಹೇಳಿದೇಂತ .....

"ಏನ್ರೀ ಇವರು ಹೇಳಿದ್ದು?" ಶಿರಸ್ತೆದಾರರು ವೆಂಕಪ್ಪಯ್ಯನನ್ನು ಕೇಳಿದರು,

"ಹುಡುಕಿ ಕೊಡ್ತೀನೀಂತಂದ್ರು ಸ್ವಾಮಿ....

"ನೋಡಿ ಶಿರಸ್ತೆದಾರ್ರೆ ನಾನು ಹಾಗಂದಿದ್ರಲ್ಲಿ ಏನು ತಪ್ಪಿದೆ ಹೇಳಿ: ಒಂದೇ ಎರಡೇ ಸಾವಿರಾರು ಫೈಲುಗಳಿವೆ. ಆದ್ರೆ ಈ ಸಮುದ್ರದಲ್ಲಿ ಆ ಫೈಲನ್ನ ಹುಡುಕಿ ತೆಗೀ-ಬ್ಯಾಡ್ವೆ ? ಅದೂ ಅಲ್ದೆ ಅರ್ಜಂಟಾತ್ಲೂ ಕೇಳ್ದೆ ಸ್ವಾಮಿ. ಅವರೇ ಅರ್ಜಂಟಿಲ್ಲಾಂತ್ಲೂ ಹೇಳಿದರು. ಮುಂಜಾನೆಯಿಂದ ಒಂದು ತೊಟ್ಟು ಕಾಫಿ ಸಹ ಬಾಯಿಗೆ ಹಾಕಿರಲಿಲ್ಲ. ಅದಕ್ಕೆ ಕುಡಕೊಂಡು ಬರೋಣಾಂತ ಹೋದೆ. ಇದರಲ್ಲಿ ನನ್ನ ತಪ್ಪೇನಾದರೂ ಇದ್ರೆ ಮಹಾಸ್ವಾಮಿಯವರು ಕೊಡೋ ಯಾವ ಶಿಕ್ಷೇನಾದ್ರೂ ಅನುಭವಿಸೋಕೆ ನಾನು ತಯಾರಾಗಿದೀನಿ. ಅಪ್ಪಣೆಯಾಗಬೇಕು" ಎಂದು ಅತೀ ವಿನಯದಿಂದ ನರಸಿಂಹಯ್ಯ ಹೇಳಿದ. ಈ ಧೂರ್ತನ ಮುಂದೆ ತಮ್ಮ ಆಟ ಸಾಗಲಾರದೆಂದು ಮನದಟ್ಟಾಗಿ ಸರಿ ಆ ಫೈಲನ್ನ ಹುಡುಕಿ ಕೊಡಿ" ಎಂದು ಅಪ್ಪಣೆಮಾಡಿ ಶಿರಸ್ತೆದಾರರು ತಮ್ಮ ಕೊಠಡಿಗೆ ವಾಪಸಾದರು.

"ಸ್ವಾಮಿ ಎಗ್ಸಾಮಿನರ್ ಸಾಹೇಬ್ರೆ, ನನಗೆ ವಿ ಪ ರೀ ತ ಕೆಲಸ ಇದೆ. ಇರೋದು ಎರಡೇ ಬೀರುಗಳು ಬಾಗಿಲುಗಳನ್ನ ತೆಗೆದಿದ್ದೇನೆ. ಎಲ್ಲಾ ಫೈಲುಗಳು ನನಗೆ ತಿಳಿದಮಟ್ಟಿಗೆ ಈ ಬೀರುಗಳಲ್ಲಿಯೇ ಇದೆ. ನಿಮಗೆ ಬೇಕಾದ ಫೈಲ್‌ನ್ನು ನೀವೇ ಹುಡುಕಿಕೊಳ್ಳಿ" ಎಂದು ಹೇಳಿ ತನ್ನ ಸೀಟಿಗಂಟಿಕೊಂಡು. ಮೇಜಿನ ಮೇಲೆ ಕಡತಗಳನ್ನು ಹರಡಿಕೊಂಡು ರಾಯಸ ಬರೆಯುತ್ತಾ ಕುಳಿತ ನರಸಿಂಹಯ್ಯ.

ಅವನು ಅಷ್ಟು ಹೇಳಿದ್ದೇ ತಡ ವೆಂಕಪ್ಪಯ್ಯ ಬೇಟೆನಾಯಿಯಂತೆ ಬೀರುವಿನೆಡೆಗೆ ನುಗ್ಗಿದರು. ಫೈಲುಗಳನ್ನೆಲ್ಲಾ ತಿರುವಿಹಾಕಿದರು. ಐದಾಯಿತು ಐದೂವರೆ ಘಂಟೆಯೂ ಆಯಿತು, ಅವರಿಗೆ ಬೇಕಿದ್ದ ಮೂವತ್ತೊಂದನೆ ಫೈಲ್ ಸಿಕ್ಕಲೇ ಇಲ್ಲ. ಕಂಗಾಲಾಗಿ ತಲೆಯಮೇಲೆ ಕೈಹೊತ್ತು ಕೂತರು ವೆಂಕಪ್ಪಯ್ಯ. ಟೈಪ್-ರೈಟರಿಗೆ ಮುಸುಕು ಹೊದ್ದಿಸಿ ಮನೆಗೆ ಹೋದ ನಾರಣಪ್ಪ. ನರಸಿಂಹಯ್ಯ ತನ್ನ ಸೀಟು ಬಿಟ್ಟು ಕದಲೇ ಇಲ್ಲ. ಮೂವತ್ತು ರೂ ಕೊಟ್ಟಿದ್ದ ಕಕ್ಷಿ ಬಂದು ತನ್ನ ಕೆಲಸವಾಗದೆಯಿದ್ದುದ್ದನ್ನೂ ಕಂಡು ಕೆಂಡಾ ಮಂಡಲವಾದ. ವೆಂಕಪ್ಪಯ್ಯನನ್ನು ಹೀನಾ ಮಾನವಾಗಿ ಬೈದ ಲಂಚ ತಗೊಳ್ತೀರಿ ಆದ್ರೂ ನಿಯತ್ತಾಗಿ ಕೆಲಸಾನು ಮಾಡಿಕೋಡಲ್ಲವಲ್ರಿ. ಕೊಡ್ರಿ ನನ್ನ ಹಣಾನ" ಎಂದು ದಬಾಯಿಸಿ ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಹೋದ. ಶಿರಸ್ತೆಗೂ ಕಾಪಿಯಿಷ್ಟಿಗೂ ಹದಿನೈದು ರೂಪಾಯಿಗಳದ್ದು ಹಂಚಿಯಾಗಿತ್ತು. ಅವರುಗಳಿಂದ ಆ ಹಣವನ್ನು ಮರಳಿ ಪಡೆಯುವುದು ಸಾಧ್ಯವಿರಲಿಲ್ಲ. ತಮ್ಮ ಕೈಯಿಂದ ಅನ್ಯಾಯವಾಗಿ ಹೈದಿನೈದು ರೂ ಕಳಚಿಕೊಂಡಿತಲ್ಲಾ ಎಂದು ವೆಂಕಪ್ಪಯ್ಯ ಕೊರಗಿದರು.

"ಏನು ಎಗ್ಸಾಮಿನರ್ ಸಾಹೇಬ್ರೆ. ಪಾರ್ಟಿ ಸಾಹೇಬರ ಕಡೆಯವರೊಂತಂದ್ರೆ ಅವರ ಹತ್ತಿರವೂ ದಕ್ಷಿಣೆ ವಸೂಲು ಮಾಡಿದ್ರಲ್ಲಾ. ನಿಮ್ಮ ಧೈರ್ಯವೇ ಧೈರ್ಯ

ಸ್ವಾಮಿ" ಎಂದು ನರಸಿಂಹಯ್ಯ ಕುಟುಕಿದಾಗ ವೆಂಕಪ್ಪಯ್ಯನವರಿಗೆ ಚಟಾಕು ಹರಳೆಣ್ಣೆಯನ್ನು ಕುಡಿದ ಅನುಭವವಾಯಿತು. "ಅಲ್ಲಯ್ಯಾ ನರಸಿಂಹಯನಿಗೂ ಒಂದು ದಾಯಭಾಗ ಕೊಟ್ಟಿದ್ರೆ ಈ ಫಜೀತಿ ಬರ್‍ತಿತ್ತೆ. ಬಂದಿದೆಲ್ಲಾ ನನಗೆ ಇರಲಿ ಅಂತ ದುರಾಸೆಪಟ್ಟೆ. ಅವ ನಿನಗೆ ಸರಿಯಾದ ಬುದ್ಧಿ ಕಲಿಸಿದ. ಅಂತ ಶಿರಸ್ತೆ ಖಂಡಿಸಿದಾಗ ಅವರಿಗೆ ಸಹಿಸಲಾಗಲಿಲ್ಲ. ನರಸಿಂಹಯ್ಯನಿಂದ ವೆಂಕಪ್ಪಯ್ಯನಿಗಾದ ತೇಜೋವಧೆಯ ಸುದ್ದಿ ಪಕ್ಕದ ಸಿವಿಲ್ ಸೆಷನ್ಸ್ ಕೋರ್ಟುಗಳಿಗೆಲ್ಲಾ ತಿಳಿದು, ಎಗ್ಸಾಮಿನರ್ ಸ್ಥಿತಿ ನಗೆಪಾಟಲಾಗಿತ್ತು. ಉಪ್ಪುಕಾರ ತಿಂದ ದೇಹ ಆವರದು. ವೆಂಕಪ್ಪಯ್ಯ ನರಸಿಂಹಯ್ಯನ ಮೇಲೆ ಕತ್ತಿಮಸೆಯುತ್ತಾ ಕುಳಿತರು.

"ನರಸಿಂಹಯ್ಯ ಎಲ್ರೀ ಹೋದ ?" ಅಂತ ಒಂದು ದಿನ ಶಿರಸ್ತೇದಾರರು ಕೇಳಿದಾಗ "ಆವರು ದಿನಾ ಎಂಟೂವರೆ- ಒಂಭತ್ತಕ್ಕೆಲ್ಲಾ ಒಂದ್ಬಿಡ್ತಾರೆ ಸಾರ್. ಬಹಳ ಕೆಲ್ಸಯಿದೆ ಅಂತ ಹೇಳ್ತಿದ್ದರು" ಎಂದು ಸಮನ್ಸ್ ಕ್ಲರ್ಕು ಸೋಮಯ್ಯನವರು ಹೇಳಿದಾಗ ಶಿರಸ್ತೆದಾರರಿಗೆ ರೇಗಿತು.

"ಅವನ ಪಿಂಡ, ಏನ್ರೀ ಅಂಥಾ ಕೆಲಸ ಇರೋದು, ಎಗ್ಸಿಕ್ಯುಷನ್ ಗುಮಾಸ್ತೆ ಆದಾಕ್ಷಣ್ಯ ಮಿಕ್ಕವರಿಗಿಲ್ಲದ ಚಾಕ್ರಿ ಇವನಿಗೇನ್ರಿಯಿದೆ. ಶಿರಸ್ತೇದಾರನಾಗಿ ನಾನೇ ಹತ್ತು ಘಂಟೆಗೆ ಬರ್‍ತೀನಿ" ಎಂದು ಆವರು ಕೂಗಾಡಿದರು. ಇಂಥಹ ಸಂಧರ್ಭಕ್ಕಾಗಿಯೇ ಕಾದು ಕುಳಿತಿದ್ದ ವೆಂಕಪ್ಪಯ್ಯನವರು ಕಿವಿ ಕಚ್ಚಲು ಪ್ರಾರಂಭಿಸಿದರು.

"ಇದರಲ್ಲಿ ಭಾಳರಹಸ್ಯವಿದೆ ಶಿರಸ್ತೆದಾರ್ರೆ. ತಮಗೆ ತಿಳಿದಿಲ್ಲ" ಎಂದು ವೆಂಕಪ್ಪಯ್ಯ ಪ್ರಾರಂಭಿಸಿದರು.

"ಏನಯ್ಯಾ ನನಗೆ ತಿಳೀದ ರಹಸ್ಯ ಈ ಕಛೇರೀಲಿ." ಎಂದು ಕೇಳಿದರು ಶಿರಸ್ತೆ. ಅವರಿಗೆ ತಿಳಿಯದಂತೆ ಫೈಲಿರಲಿ ಒಂದು ಚೂರು ಕಾಗದವೂವಿಲೇವಾರಿ ಆಗುವಂತಿರಲಿಲ್ಲ.

"ಬ್ಯಾಡಿ ಸ್ವಾಮಿ ಆ ವಿಷಯ ಹೇಳಿ ನಾನ್ಯಾಕೆ ಕೆಟ್ಟವನಾಗಲಿ. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಅನ್ನೋಹಾಗೆ"

"ಇದೇ ನನಗೆ ಹಿಡಿಸೋಲ್ಲ ವೆಂಕಪ್ಪಯ್ಯ ಶುರು ಮಾಡ್ತೀಯ, ಮಧ್ಯೆ-ನಿಲ್ಲಿಸಿ ಪ್ರಾಣ ಹಿಂಡ್ತಿಯ. ಆದೇನು ಬೊಗಳಯ್ಯ.

"ನೋಡಿಸ್ವಾಮಿ, ನರಸಿಂಹಯ್ಯನಿಗೆ ಕ್ಲಯಂಟ್ಸುಗಳು ಬಹಳ ಆಗೋಗಿದಾರೆ. ಈಚೇಗೆ ಡಿಕ್ರಿ ಆದಮೇಲೆ ಎಗ್ಸಿಕ್ಯೂಷನ್ ಫೈಲ್ ಮಾಡೋಕೆ ಜನ ಶುರು

ಮಾಡಿದ್ದಾರೆ. ಅದಕ್ಕೆ ಅವನು ಬಹಳ ಬಿಜಿಯಾಗಿದ್ದಾನೆ ಸ್ವಾಮಿ. ತಮ್ಮೆದುರಿಗೆ ಕಕ್ಷಿಗಳಹತ್ತಿರದಿಂದ ದಕ್ಷಿಣೆ ತೆಗೊಂಡ್ರೆ ಆಗುತ್ತೆ? ಅದಕ್ಕೆ ಮುಂಚಾನೇನೆ ಬಂದು ದಕ್ಷಿಣೆ ವಸೂಲು ಮಾಡ್ಕೊಂಡು, ಆಮೇಲೆ ಕೆಲಸಕ್ಕೆ ಶುರು ಮಾಡೋದು ನರಸಿಂಹಯ್ಯನ ಪದ್ಧತಿ, ಎಂದು ವೆಂಕಪ್ಪಯ್ಯ ದೂಷಹಾಕಿದರು.

ಮೇಲು ಸಂಪಾದನೆಯಲ್ಲಿ ತಮಗೆ ಪಾಲು ಕೊಡದೆ ಎಲ್ಲವನ್ನು ತಾನೇ ಲಪ-ಟಾಯಿಸುತ್ತಿದ್ದ ನರಸಿಂಹಯ್ಯನ ಬಗ್ಗೆ ಅವರಿಗೆ ಕೋಪ ಉಕ್ಕಿತು. ಬೆಂಚ್ ಕ್ಲರ್ಕಿಂದ ಹಿಡಿದು ಸಮನ್ ಗುಮಾಸ್ತೆಯವರೆಗೆ ಎಲ್ಲರೂ ತಮ್ಮ ಮೇಲು ಸಂಪಾದನೆಯಲ್ಲಿ ಒಂದು ಪಾಲನ್ನು ಶಿರಸ್ತೆಯವರಿಗೆ ಸಮರ್ಪಿಸಿ, ಬಾಲ ಗುಂಡಾಡಿಸಿಕೊಂಡು ಅವರ ಹಿಂದು ಮುಂದು ಸುತ್ತುತ್ತಿದ್ದರು. ಬಲಿತ ಪಳಗಿದ ನಗದು ಗುಮಾಸ್ತೆಯೇ ಅವರ ಚಮಚವಾಗಿದ್ದ, ಆದರೆ ಈ ಪುಡಿಚಿಲ್ರೆ ಇನ್ನೂ ಐದು ವರ್ಷ ಸರ್ವೀಸ್ ಸಹ ಆಗದ ನರಸಿಂಹಯ್ಯ ಈರೀತಿ ಕಂಟ್ರೋಲಿಲ್ಲದೆ ವರ್ತಿಸುತ್ತಿದ್ದುದು ಅವರಿಗೆ ಸಹಿಸಲ ಸಾಧ್ಯವಾಗಿತ್ತು. ಅವನು ಸೀಟಿಗೆ ಬಂದಾಗ ಶಿರಸ್ತೆದಾರರು ಅಟಕಾಯಿಸಿ ಕೊಂಡರು,

"ಏನ್ರೀ ಎಷ್ಟೊತ್ತಿಗೇರಿ ಬರೋದು. ನಿಮಗೇನು ಹೇಳೋರು ಕೇಳೋರು ಯಾರೂ ಇಲ್ವ?" ಎಂದು ಅವರು ಕೂಗಾಡಿದರು.

"ಸ್ವಾಮಿ, ಸಾಹೇಬರು ಒಂದು ಫೈಲು ಅರ್ಜಂಟಾಗಿ ಬೇಕಾಗಿದೆ. ಬೇಗ ಕಛೇರಿಗೆ ಬನ್ನೀಂತ ಅಪ್ಪಣೆ ಕೊಡಿಸಿದ್ದರು. ಆದಕ್ಕೆ ಬೆಳಿಗ್ಗೆ ಎಂಟುವರೆಗೆಲ್ಲಾ ಆಫೀಸಿಗೆ ಬಂದು, ಸಾಹೇಬರಿಗೆ ಫೈಲನ್ನ ಕೊಟ್ಟು ಕೇಸಿನ ಬಗ್ಗೆ ವಿಶಾದೀಕರಿಸಿ ಆಮೇಲೆಯೇ ನಾನು ಒಂದು ಗುಟುಕು ಕಾಫಿ ಕುಡಿದು ಬರಲು ಹೋಟೆಲಿಗೆ ಹೋದೆ ಸ್ವಾಮಿ." ಎಂದು ನರಸಿಂಹಯ್ಯ ಹೇಳಿದ,

ಸಾಹೇಬ ಮುನಿಸೀಫ್ ಮುನಿರೆಡ್ಡಿಯ್ಯೇ ಹೇಳಿದ ಮೇಲೆ ಇನ್ನು ತಮ್ಮದೇನಿ-ದೆಯೆಂದು ತಿಳಿದು ತೆಪ್ಪಗಾದರು. ಆದರೂ ತಮ್ಮಗತ್ತನ್ನು ಬಿಡದೆ, "ಕಾಫಿ ಕುಡಿಯೋಕೆ ಇಷ್ಟು ಹೊತ್ತು ಮಾಡಿದ್ರೆ ಹೇಗ್ರಿ" ಎಂದು ಕೇಳಿದರು.

"ಕಾಫಿ ಕುಡಿದು ಹಾಗೇ ಆ ಹೊಂಗೆ ಮರದಡಿಲಿ ಒಂದು ಸ್ವಲ್ಪ ಹೊತ್ತು ಸ್ವಲ್ಪ ಹೊತ್ತು ನಿಂತಿದ್ದೆ ಸ್ವಾಮಿ" ಎಂದು ತಣ್ಣಗೆ ಉತ್ತರಿಸಿದ ನರಸಿಂಹಯ್ಯ.

"ಏನ್ರೀ ಇದು, ವೇಳೆಗೆ ಸರಿಯಾಗಿ ಕಛೇರೀಲಿರೋದು ಬಿಟ್ಟು ಹೀಗೆ ಹೊಂಗೆ ಮರ ಬೇವಿನ ಮರಾಂತ ಸುತ್ತುತ್ತಿದ್ರೆ ಕಛೇರಿ ಕೆಲಸ ಯಾರ್‍ರೀ ಮಾಡೋರು. ಇದಕ್ಕೇನಾ ಸರ್ಕಾರ ನಿಮಗೆ ಪಗಾರ ಕೊಡೋದು? ಎಂದು ಅವರು ತಡವಿ-

ಕೊಂಡರು. ಇದೊಂದು ಪಾಯಿಂಟಿನಲ್ಲಿ ಅವನನ್ನು ಸಿಕ್ಕಿಸಿಕೊಂಡು, ಅವನ ಮೇಲೆ ಹಾರಾಡಬಹುದೆಂಬ ಸಮಾಧಾನ ಅವರಿಗೆ.

"ಹಾಗಲ್ಲ ಸ್ವಾಮಿ ನಿಮಗೆ ತಿಳಿದಿರೋ ಹಾಗೆ ನನ್ನ ತಲೆಮೇಲೆ ತಾರಿಸಿಗೆ ಸಿಕ್ಕಿಸಿರೋ ಫ್ಯಾನು ಕುಲಗೆಟ್ಟಿದೆ. ರಿಪೇರಿ ಮಾಡಿಸುವಂತೆ ಸಾಹೇಬರೂ ತಮಗೆ ಅಪ್ಪಣೆ ಮಾಡಿದರು. ನಾನೂ ಆ ಬಗ್ಗೆ ಪದೇ ಪದೇ ತಮ್ಮಲ್ಲಿ ಅರಿಕೆ ಮಾಡಿಕೊಂಡೆ ಆದರೂ ತಾವು ಈವರಿವಿಗೆ ಅದಕ್ಕೆ ಮನಸ್ಸು ಕೊಡಲಿಲ್ಲ. ಗಾಳಿಯಿಲ್ಲದೆ ಈ ಸೆಖೆ-ಯಲ್ಲಿ ಉಸಿರು ಸಿಕ್ಕಿಕೊಳ್ಳೋ ಪರಿಸ್ಥಿತಿ ನನ್ನದಾಗಿದೆ. ಆದಕ್ಕೆ ಆಗಾಗ ಹೊರಗೆ ಹೋಗಿ ಬರ್‍ತಿದ್ದೀನಿ ಸ್ವಾಮಿ. ಬೇವಿನ ಮರದ ಕೆಳಗೆ ನಿಂತರಂತೂ ಆರೋಗ್ಯಕ್ಕೆ ಬಹಳಾ ಒಳ್ಳೇದು ಅಂಬೋದು ವೈದ್ಯರ ಅಭಿಪ್ರಾಯ. ಅಂತ ನರಸಿಂಹಯ್ಯ ಉತ್ತರಿಸಿದಾಗ ಶಿರಸ್ತೆಯವರಿಗೆ ಮೈಪರಚಿಕೊಳ್ಳುವ ಹಾಗಾಯಿತು. ಫ್ಯಾನ ರಿಪೇರಿಯಾಗದ ವಿಷಯ ಮುನ್ಸೀಫ್‌ನಿಗೆ ತಿಳಿದರೆ ಗತಿ ? ಸಣ್ಣಪುಟ್ಟಲೋಪದೋಷ ಗಳಿಗೆ ರೇಗಾಡುವ ಮುನಿರೆಡ್ಡಿ ತನಗೆ ಮೆಮೋ ಕೊಡದೆ ಇರ್‍ತಾನೆಯೋ?" ಎಂದು ಚಿಂತಿಸಿ "ಸರಿ ಸೀಟಿಗೆ ಹೋಗಿ ಕೆಲಸ ನೋಡಿ" ಎಂದು ಅವನಿಗೆ ಅಪ್ಪಣೆಯಿತ್ತು. ತಮ್ಮ ರುಮಾಲನ್ನು ತೆಗೆದು ಮೇಜಿನಮೇಲಿರಿಸಿ, ತಲೆಯ ಮೇಲಿದ್ದ ಗೋಪ್ಪಾದದ ಗಂಟನ್ನು ನೇವರಿಸುತ್ತಾ ಕುಳಿತರು ಶಿರಸ್ತೆದಾರರು.

ನರಸಿಂಹಯ್ಯನಿಗೆ ಬುದ್ಧಿ ಕಲಿಸದಿದ್ದರೆ ಮಿಕ್ಕ ಗುಮಾಸ್ತರುಗಳು ತಮ್ಮಮುಂದೆ ಬಾಲ ಗುಂಡಾಡಿಸುವುದನ್ನೂ ಆವನ ಕೂಟೆ ಸೇರಿ ಕೊಂಡರೆ ತಮ್ಮ ಗತಿಯೇನು ಎಂಬ ಚಿಂತೆ ಶಿರಸ್ತೆಯವರನ್ನು ಆವರಿಸಿತು. ಇರ್‍ಲಿ ನನ್ನಕಪಿ ಮುಷ್ಟಿಯಿಂದ ಎಲ್ಲಿ ತಪ್ಪಿಸಿಕೊಂಡು ಹೋಗ್ತಾನೆ ನನ್ನ ಸರ್ವೀಸಿನಲ್ಲಿ. ಎಂಥೆಂಥೋರನ್ನೋ ಕಂಡಿದೀನಿ. ಈ ಎಳೇ ನಿಂಬೇನ ಹದ್ದು ಬಸ್ತಿನಲ್ಲಿಡೋದು ಒಂದು ಕಷ್ಟವೇ ?" ಎಂದು ಧೈರ್ಯ ತಂದು ಕೊಂಡರು. "ನೋಡ್ತಿರಯ್ಯಾ ಇನ್ನೊಂದು ವಾರದೊಳಗೆ ಅವನ ಜುಟ್ಟು ನನ್ನ ಕೈಲಿ ಇಲ್ಲಿದ್ರೆ ನನ್ನ ಹೆಸ್ರು ಶೀನಪ್ಪನೆ ಅಲ್ಲ" ಎಂದು ಶಪಥಿಸಿ, ತಮ್ಮಮುಂದೆ ಗಿರಿಗಾಯಾ-ಸಿದ್ದ ಮಿಕ್ಕ ಗುಮಾಸ್ತರಿಗೆ ಆಶ್ವಾಸನೆಕೊಟ್ಟು ತಲೆಯ ಮೇಲೆ ರುಮಾಲನಿಟ್ಟು ಕೊಂಡರು. ಮುಂದಿನ ವಾರದ ಪ್ರಾರಂಭದಲ್ಲಿ ಮುನ್‌ಸೀಫ್ ಕೋರ್ಟಿನಲ್ಲಿ ಆಚ್ಚರಿಯ ಸಂಗತಿಯೊಂದು ನಡೆದೇ ಹೋಯಿತು. ಒಂದು ದಿನ "ನರಸಿಂಹಯ್ಯ ಸೀಟಿನಲ್ಲಿಲ್ಲ ಸ್ವಾಮಿ, ಏನಾದ್ರು ರಜೆಹಾಕಿದಾರೋ" ಎಂದು ನವಿರಾಗಿ ವೆಂಕಪ್ಪಯ್ಯ ಶಿರಸ್ತೆಯವ ರನ್ನು ಕೇಳಿದರು. ಏನಯ್ಯಾ ಶಿರಸ್ತೆದಾರ "ನಾನೋ, ನೀನೋ, ನಿನ್ನ ಕೇಳಿ. ಅವನು ಹೋಗ್ಬೇಕೇನು" ಎಂದು ಅವರು ರೇಗಿದಾಗ ವೆಂಕಪ್ಪಯ್ಯ ಹೆದರಿದರು. "ಏನು ಸ್ವಾಮಿ ನರಸಿಂಹಯ್ಯ ಕಕ್ಷಿಗಳನ್ನ ಕಟ್ಟಿಕೊಂಡು ಆಹೊಂಗೆ ಮರದ ಕೆಳಗೆ ನಿಂತಿದ್ನಲ್ಲ" ಎಂದು ನಗದಿ ಗುಮಾಸ್ತೆ ಇನ್ನೊಂದು ದಿನ ಕೇಳಿದಾಗ. "ನೀನು

ಬಾಯ್ಮುಚ್ಚಿಕೊಂಡಿರಯ್ಯ. ಅವನು ನಿನ್ನಹಾಗೆ ಯಾವ ಕೆಲಸ ಪೆಂಡಿಂಗಿಟ್ಟಿದಾನೆ, ಕೆಲಸ ಕ್ಲಿಯರ್ ಮಾಡಿ, ಯಾರೋ ಸಂಭಂದಿಗಳು ಬಂದ್ರೂಂತ ಹೋದ. ನೀನೂ ಎಷ್ಟುಥಥ ಹೀಗೆ ಹೋಗಿಲ್ಲ ? ಅಂತ ಅಮರಿಕೊಂಡಾಗ ನಗದಿ ಗುಮಾಸ್ತೆ ತೆಪ್ಪಗಾದ.

ನರಸಿಂಹಯ್ಯನ ಹೆಸರು ಎತ್ತಿದರೆ ಸಾಕು ಅವನನ್ನು ವಹಿಸಿಕೊಂಡು ವಕೀಲಿ ಮಾಡುತ್ತಿದ್ದುದಲ್ಲದೆ, ಅವರು ರಜೆ ಹಾಕಿದಾಗಲೆಲ್ಲಾ ಶಿರಸ್ತೆದಾರರು ಗೊಣಗುಟ್ಟದೆ ಸ್ಯಾಂಕ್ಷನ್ ಮಾಡುತ್ತಿದ್ದರು. ಒಂದುದಿನವಂತೂ ನರಸಿಂಹಯ್ಯ ಹನ್ನೆರಡು ಘಂಟೆ ಗೆಲ್ಲಾ ಮನೆಗೆ ಹೋಗುವುದಾಗಿ ಹೇಳಿದಾಗ, "ಅಯ್ಯೋ ಅದಕ್ಯಾಕೆ ಹಿಂದೇಟು ಹೋಡಿತೀರಿ. ನಿಮ್ಮ ಕೋಟನ್ನ ಕುರ್ಚಿಗೆ ತಗುಲಿಸಿ ಹೋಗಿಯಪ್ಪ, ಪಾಪ ನೀವು ಪರ್ಮಿಷನ್ ಕೇಳೋದೇ ಅಪರೂಪ. ಎಂದು ಶಿರಸ್ತೆ ಅಪ್ಪಣೆ ಕೊಡಿಸಿದಾಗ ಮಿಕ್ಕ ಗುಮಾಸ್ತರೆಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ರಿಟೈರ್ ಆಗೋಕೆ ಇನ್ನೂ ಮೂರು ವರ್ಷ ಬಾಕಿ ಇದೆ. ಆಗಲೇ ಇವರಿಗೆ ಅರಳು ಮರಳೆ ? ನರಸಿಂಹಯ್ಯನ ಜುಟ್ಟನ್ನು ಹಿಡಿಯುವ ಬದಲು, ಶಿರಸ್ತೆಯವರೆ ತಮ್ಮ ಗೋಪ್ಯಾದದ ಗಂಟನ್ನು ಅವನ ಕೈಗೆ ಕೊಟ್ಟುಕೂತರೆ, ಏನೂ ಅರ್ಥವಾಗದೆ ಕ್ಲರ್ಕುಗಳೆಲ್ಲಾ ಕಂಗಾಲಾದರು.

"ಶಿರಸ್ತೆ ಶೀನಪ್ಪನವರ ಇತ್ತೀಚಿನ ಚರ್ಯೆಯನ್ನು ನರಸಿಂಹಯ್ಯ ಅರ್ಥ ಮಾಡಿಕೊಂಡಿದ್ದೇ ಬೇರೆ ರೀತಿಯಲ್ಲಿ. ಮುದುಕನನ್ನು ತಾನು ಪಳಗಿಸಿ ತಹಬಂದಿಗೆ ತಂದಿದ್ದೇನೆಂದುಕೊಂಡು ಅವನು ಜಂಭದಕೋಳಿಯಂತೆ ಮೆರೆದ. ಕಛೇರಿಗೆ ಹತ್ತು ನಿಮಿಷಬಂದರೆ' ಹೊರಗಡೆ ಘಂಟೆಗಟ್ಲೆ ಕಾಲಕಳೆಯುತ್ತಿದ್ದ. ಆನು ಏನು ಮಾಡಿದರೂ ಶಿರಸ್ತೆದಾರರು ತೆಪ್ಪಗಿರುತ್ತಿದ್ದರಿಂದ ಅವನು ಲಂಗು-ಲಗಾಮಿಲ್ಲದ ಕುದುರೆಯಂತಾದ ಮೊದಲು ಕೋರ್ಟಿನ ಫಾಸಲೆಯಲ್ಲೇ ಅಲೆಯುತ್ತಿದ್ದವನು, ಈಗ ಕಕ್ಷಿಗಳೊಡನೆ ಹೊರಗಡೆ ಸುತ್ತಲೂ ಪ್ರಾರಂಭಿಸಿದ್ದ.

ಅದೊಂದುದಿನ ಮುನ್ಸೀಫರಿಗೆ ಎಗ್ಸಿಕ್ಯೂಷನ್ ಫೈಲು ನಂಬರು ಐವತ್ತೊಂದು ಬೇಕಾಗಿರುವುದು, ಶಿರಸ್ತೆದಾರರಿಗೆ ಡವಾಲಿ ತಿಮ್ಮಯ್ಯನಿಂದ ತಿಳಿದು ಬಂತು, ಯಥಾಪ್ರಕಾರ ನರಸಿಂಹಯ್ಯ ಸೀಟಿನಲ್ಲಿಲ್ಲದ್ದರಿಂದ ಅವರು ತಮ್ಮಲ್ಲಿದ್ದ ಡೂಪ್ಲಿಕೇಟ್ ಬೀಗದಕೈಯಿಂದ, ಅವನ ಬೀರುವನ್ನು ತೆಗೆದು ಅದರಲ್ಲಿದ್ದ ಐವತ್ತೊಂದನೇ ನಂಬರ್ ಫೈಲನ್ನು ತೆಗೆದುಕೊಂಡು, ರೆಕಾರ್ಡ್ ರೂಮಿನಲ್ಲಿ ಬಚ್ಚಿಟ್ಟು ತಣ್ಣಗೆ ಕುಳಿತರು.

ನರಸಿಂಹಯ್ಯನಿಗೆ ಸಾಹೇಬರ ಬುಲಾವ್ ಬಂದಾಗ ಶಿರಸ್ತೆಯವರು ಖುದ್ದು ಛೇಂಬರ್ಸಿಗೆ ಹೋದರು. "ಸ್ವಾಮಿ ನರಸಿಂಹಯ್ಯನೋರು ಸೀಟಿನಲ್ಲಿಲ್ಲ. ಅವರು ಯಾವಾಗ ಹೋಗ್ತಾರೋ ಯಾವಾಗ ವಾಪಸು ಬರ್ತಾರೋ ನನಗೆ ಹೇಳೋದೂ

ಇಲ್ಲ. ನನ್ನ ಪರ್ಮಿಷನ್ ತೆಗೋಳ್ಳೋದೂ ಇಲ್ಲ. ದಿನವಹಿ ಕಕ್ಷಿಗಳ್ನ ಕಟ್ಟಿಕೊಂಡು ಹೊರಗೇ ಸುತ್ತುತ್ತಿರ್ತಾರೆ. ಅವರು ಸೀಟಿಗೆ ಬಂದ ತಕ್ಷಣ ತಮ್ಮನ್ನ ನೋಡ್ಲಿಕ್ಕೆ ಹೇಳ್ತೀನಿ ಸ್ವಾಮಿ, ಎಂದು ಅತೀ ವಿನಯದಿಂದ ನಿವೇದಿಸಿದರು.

ಮುನಸೀಫ್ ಮುನಿರೆಡ್ಡಿ ಮೊದಲೇ ಟಾಂಗ್ ಬಿರಾಂಗ್ ಇಸಮ್ಮು, ಸಾಲದ್ದಕ್ಕೆ ಅವನು ಆ ಫೈಲಿನ ವಿಷಯದಲ್ಲಿ ತಲೆ ಕೆಡಿಸಿ ಕೊಂಡಿದ್ದ ಬೇರೆ. ಅವನಿಗೆ ಶಿರಸ್ತೆದಾರ-ರಿಂದ. ನರಸಿಂಹಯ್ಯನ ಉದ್ಧಟತನವನ್ನು ಕೇಳಿ ತಲೆ ಕೆಟ್ಟುಹೋಯಿತು. ಆಫೀಸಿನ ಕೆಲಸದಲ್ಲಿ ಒಂದು ಚೂರು ಲೋಪವಾದರು ಸಹಿಸದ ಮುನಿರೆಡ್ಡಿ, ನರಸಿಂಹಯ್ಯ ಕಛೇರಿಗೆ ಬಂದ ಕೂಡ್ಲೆ ತನ್ನ ಛೇಂಬರ್ನಿಗೆ ಅವನನ್ನು ಕಳುಹಿಸುವಂತೆ ಅಪ್ಪಣೆಮಾಡಿ ಅವನಿಗಾಗಿ ಕಾದುಕುಳಿತ. ನರಸಿಂಹಯ್ಯ ಬಂದದ್ದೇ ಕಛೇರಿ ಮುಚ್ಚುವ ವೇಳೆಗೆ. ಸಾಹೇಬರು ತನಗಾಗಿ ಕಾದಿರುವ ವಿಷಯ ತಿಳಿದು ಕಂಗಾಲಾದ. ಕೋಪದಿಂದ ಕುದಿಯುತ್ತಿದ್ದ ಮುನಿರೆಡ್ಡಿ ತಕ್ಷಣವೇ ಐವತ್ತೊಂದನೇ ನಂಬರ್ ಫೈಲ್ ತಂದು ಕೊಡುವಂತೆ ಆಜ್ಞಾಪಿಸಿದ. ದುಡು ದುಡು ಓಡಿ ಬಂದ ನರಸಿಂಹಯ್ಯ ಬೀರುವನ್ನು ತೆಗೆದು ಫೈಲಿಗಾಗಿ ತಡಕಾಡಿದ, ರಿಕಾರ್ಡ್ ರೂಮಿನಲ್ಲಿ ಬಿದ್ದುಕೊಂಡಿದ್ದ ಆ ಫೈಲನ್ನು ಬೀರುವಿನಲ್ಲಿ ಹುಡುಕಿದರೆ ಅದು ಸಿಕ್ಕುತ್ತದೆಯೇ ? ರಿಕಾರ್ಡ್‌ಗಳನ್ನೆಲ್ಲಾ ತಿರುವಿಹಾಕಿದ, ಮೇಜಿನಮೇಲಿದ್ದ ಕಾಗದಗಳನೆಲ್ಲಾ ಗೂರಾಡಿದ. ಬೇಕಾದ ಫೈಲು ಸಿಕ್ಕದೆ ಬೇವಿನ ಕಾಯಿ ತಿಂದವನ ಮುಖ ಹೊತ್ತು, ಮುನ್ಸೀಫರ ಮುಂದೆ ಬಂದು ನಿಂತು ಕೊಂಡ.

"ಎಲ್ರೀ ಫೈಲು ?" ಮುನಿರೆಡ್ಡಿ ಖಾರವಾಗಿ ಕೇಳಿದಾಗ ಅವನು ಬ್ಬೆಬ್ಬೆಬೆ ಎಂದು ತೊದಲಿದ.

"ಹೀಗೇನೇರ್ರಿ ರಿಕಾರ್ಡ್ ಮೇಂಟೈನ್ ಮಾಡೋದು ? ಇಷ್ಟೊಂದು ಬೇಜವಾಬ್ದಾರಿಯಿರೋರು ಯಾಕ್ರಿ ಈ ಚಾಕ್ರೀಗೆ ಬಂದ್ರಿ. ಆಫೀಸೂಂತಂದ್ರೆ ನಿಮ್ಮ ಮಾವನ ಮನೇಂತ ತಿಳ್ಕೊಂಡ್ರೋ. ಶಿರಸ್ತೆದಾರ್ರೆ ಮೊದಲು ಟ್ರಾನ್ಸ್‌ಫರ್ ಆರ್ಡರ್ ರೆಡಿ ಮಾಡಿ ನನ್ನ ಸಹಿಗೆ ಕಳಿಸಿ. ಹಾಗೆ ಈತನ ಸರ್ವೀಸ್ ರಿಕಾರ್ಡ್‌ನ್ನು ಕಳಿಸಿ. ಸರಿಯಾಗಿ ಅದರಲ್ಲಿ ಬರೆ ಎಳೀತೀನಿ. ಇಲ್ದಿದ್ರೆ ಇಂಥೋರಿಗೆ ಬುದ್ಧಿ ಬರೋಲ್ಲ, ಹೂಕ್ದಿಕ್... ಎಂದು ಮುನಿಸಿಫ್ ಮುನಿರೆಡ್ಡಿ ಹಾರಾಡಿದ, ಮಿಕ್ಕ ಗುಮಾಸ್ತರು ಛೇಂಬರ್ನಿನ ಹೊರಗಡೆ ನಿಂತು ಕುತೂಹಲದಿಂದ ಅವನಿಗಾಗುತ್ತಿರುವ ತೇಜೋವಧೆಯನ್ನು ವೀಕ್ಷಿಸುತ್ತಿದ್ದರು.

ಶಿರೆಸ್ತೆ ಶೀನಪ್ಪನವರು ಮಧ್ಯೆ ಮೂಗು ಹಾಯಿಸಿ "ಸ್ವಾಮಿ ಏನೋ ಚಿಕ್ಕ-ವಯಸ್ಸು. ಅನುಭವ ಕಡಿಮೆ, ನರಸಿಂಹಯ್ಯ ಮಕ್ಕಳೊಂದಿಗ. ಅವನಿಗಿಷ್ಟು

ದೊಡ್ಡ ಶಿಕ್ಷೆ ಕೊಡಬೇಡಿ ಸಾಹೇಬರೆ. ಇನ್ಮೇಲೆ ಅವರು ಸರಿಯಾಗಿ ನಡೊತಾರೆ. ನಾವೆಲ್ಲಾ ಆ ಫೈಲನ್ನು ಹುಡುಕಿ ನಾಳೆ ಮುಂಜಾನೆ ಹೊತ್ತಿಗೆ ತಮ್ಮ ಟೇಬಲ್ಲಿನ ಮೇಲೆ ಇಟ್ಟೇರ್ತೀವಿ ಸ್ವಾಮಿ. ತಾವು ಇದೊಂದು ಸಲ ನರಸಿಂಹಯ್ಯ-ನವರನ್ನು ಕ್ಷಮಿಸಿಬಿಡಿ. ಎಂದು ಅವನು ಸಾಹೇಬರನ್ನು ಕೇಳಿಕೊಂಡಾಗ, ಮಿಕ್ಕ ಕ್ಲರ್ಕುಗಳಿಗೆ ಆಶ್ಚರಿಯಾಗುವುವರಲಿ, ಸ್ವತಃ ನರಸಿಂಹಯ್ಯನೇ ಮೂಗಿನಮೇಲೆ ಬೆರಳಿಟ್ಟು ಕೊಂಡ.

ಏನೋ ಅವರ ಮಾತಿಗೆ ಬೆಲೆಕೊಟ್ಟು ಈ ಸಲ ವಾರನ್ ಮಾಡಿದೀನಿ. ಶಿರಸ್ತೆದಾರರ ಪರ್ಮಿಷನ್ ಇಲ್ಲದೆ ನೀವು ಅಲ್ಲಿ-ಇಲ್ಲಿ ಅಲೆದಾಡ್ತಿದ್ರೆ ನಾನು ಸಿವಿಯರ್ ಆ್ಯಕ್ಷನ್ ತೆಗೋತೀನಿ ತಿಳೀತೆ ? ಬೆಪ್ಪನ ಹಾಗೆ ಇಲ್ಲಿನಿಂತ್ಕೊ ಬೇಡಿ ಮೊದ್ಲು ಹೋಗಿ ಫೈಲನ್ನು ಹುಡುಕಿ" ಎಂದು ತಾಕೀತುಮಾಡಿ "ಈತ ಏನಾದ್ರೂ ತಿರುಗಿಬಾಲ ಬಿಚ್ಚಿದ್ರೆ ನನಗೆ ರಿಪೋರ್ಟ್‌ಮಾಡಿ, ನಾಳೆ ನನ್ನ ಟೇಬಲ್ಲಿನ ಮೇಲೆ ಆ ಫೈಲು ಇರ್ಬೇಕು ಅದಕ್ಕೆ ಅರೇಂಜ್‌ಮಾಡಿ" ಎಂದು ಶಿರಸ್ತೆದಾರರಿಗೆ ಅಪ್ಪಣೆಯಿತ್ತು ಸಾಹೇಬರು ತಮ್ಮ ಛೇಂಬರ್ನಿನಿಂದ ಹೊರಬಿದ್ದರು.

ಗುಮಾಸ್ತರುಗಳು ಹಲ್ಲುಕಿರಿಯುತ್ತಾ ನರಸಿಂಹಯ್ಯನಿಗಾದ ಪರಾಭವವನ್ನು ಕಂಡು ಹಿಗ್ಗಿದರು. ಗೋಣು ತಗ್ಗಿಸಿದ ನರಸಿಂಹಯ್ಯ ತನ್ನ ಸೀಟಿಗೆ ಬಂದು ಕುಸಿದು ಕುಳಿತ. ಶಿರಸ್ತೆ ಶೀನಪ್ಪ ಸಾಧಾರಣವಾದ ಸಾಧು ಪ್ರಾಣಿಯಲ್ಲ ಎನ್ನುವುದನ್ನು ತಿಳಿದು ಕೊಂಡ. ವೆಂಕಪ್ಪಯ್ಯ ಶಿರಸ್ತೆದಾರರನ್ನು ಹೋಟೇಲಿಗೆ ಎಳೆದೊಯ್ದು, "ಸ್ವಾಮಿ, ಖಧೀಮ ನರಸಿಂಹಯ್ಯನನ್ನು ಹ್ಯಾಂಗೆ ಕಂಟ್ರೋಲಿಗೆ ತಂದ್ರಿ ಅವರ ರಹಸ್ಯ ಹೇಳಿ ದೇವ್ರು ಎಂದು ಪೀಡಿಸಿದರು. "ನೋಡು ವೆಂಕಪ್ಪಯ್ಯ ನಮ್ಮ ಶೀರ್ಧ-ರೂಪುಗಳು ಏನು ಹೇಳ್ತಿದ್ದರು ಗೊತ್ತೆ ? ಅವನು ಬಿಟ್ಟ ಬಾಣಾನ ಅವನಿಗೆ ತಿರುಗಿಸು ಆಗ ಎಂಥೋರನ್ನೂ ನಿಯಂತ್ರಿಸಬಹುದು ಅಂತ ಕಿವಿಮಾತು ಹೇಳಿದ್ದರು. ನರಸಿಂ-ಹಯ್ಯ ನಿನಗೆ ಬೇಕಾದ ಫೈಲನ್ನೂ ಮುಚ್ಚಿಟ್ಟು ನಿನ್ನ ಸತಾಯಿಸಿದ, ನಾನು ಅವನ ಫೈಲನ್ನು ಮುಚ್ಚಿಟ್ಟು ಅವನಿಗೆ ಬುಧ್ಧಿ ಕಲಿಸಿದೆ. ಎಲ್ಲಾ ತಿರುಗು ಬಾಣ ಅಷ್ಟೆ ಎಂದು ಶಿರಸ್ತೆನುಡಿದು ತಮ್ಮ ಮುಂದಿದ್ದ ಕಾಫಿಯನ್ನು ಗುಟುಕರಿಸಿದರು.

ಉಗುರು ಬೋಳಿಸಿ, ಹಲ್ಲುಕಿತ್ತ, ತೋಳವಾದ ರಿಬೆಲ್ ಕ್ಲರ್ಕ್ ನರಸಿಂಹಯ್ಯನ ಜುಟ್ಟು ಕೈಗೆ ಸಿಕ್ಕಿದ ಮೇಲೆ ಶಿರಸ್ತೆದಾರರು ತಮ್ಮ ದರ್ಪವನ್ನು ಅವನ ಮೇಲೆ ಚಲಾಯಿಸಿದರು, ಮಿಕ್ಕ ಗುಮಾಸ್ತರ ರೀತ್ಯಾ ಅವನೂ ಶೀನಪ್ಪನವರಿಗೆ ಕಪ್ಪಕಾಣಿಕೆ-ಗಳನ್ನು ಸಲ್ಲಿಸುತ್ತಾ ಬಾಲಗಂಡಾಡಿಸಿಕೊಂಡು ಅವರ ಹಿಂದೆ ಮುಂದೆ ಓಡಿಯಾಡಿ ಕೊಂಡಿರುವುದನ್ನು ಅಭ್ಯಾಸ ಮಾಡಿಕೊಂಡ.

ಅಳುವಿಗೆ ಕಾರಣ

ಪೀಪಿ

ಎಂಟು ವರ್ಷ ವಯಸ್ಸಿನ ಹುಡುಗನೊಬ್ಬ ಗೋಳೋ ಎಂದು ಅಳುತ್ತಾ ಮನೆಯ ಮುಂದೆ ನಿಂತು ಬೀದಿಯಲ್ಲಿ ಓಡಾಡುವವರ ಗಮನ ಸೆಳೆಯುತ್ತಿದ್ದ ಅವನ ದು:ಖವನ್ನು ಕಂಡ, ಸಾಮಾಜಿಕ ಕಳಕಳಿಯುಳ್ಳ ಮಹಿಳೆಯೊಬ್ಬಳು ಅವನನ್ನು ಸಾಂತ್ವನ ಗೊಳಿಸಲು ಹತ್ತಿರ ಬಂದು ಮೈದಡವಿ, "ಯಾಕಪ್ಪಾಮರಿ ಹೀಗೆ ಅಳ್ತಿದಿಯಾ ? ಏನಾದ್ರೂ ಚೇಷ್ಟೆಮಾಡಿ ಹೊಡೆಸಿಕೊಂಡೆಯಾ ?" ಎಂದು ಕೇಳಿದಳು

"ಏನೂ ಮಾಡ್ಲಿಲ್ಲ......ಊಂs, ಊಂs.......

"ಮತ್ತೆ ಯಾಕೆ ಅಳ್ತಿದೀಯಾ ಹೇಳು......ಜಾಣಮರಿ"

"ಮತ್ತೇ......ಮತ್ತೇ......ನಂಗೊಬ್ಬ ತಮ್ಮ ಹುಟ್ಟಿದಾನೆ ಈ ಹೊತ್ತು.... ಅದಕ್ಕೇ"

"ಓಹೋ ! ತಮ್ಮ ಹುಟ್ಟಿದ್ರೆ ಹೀಗೆ ಅಳ್ತಾರಾ ಯಾರಾದ್ರೂ ? ಆಟ ಆಡೋದಕ್ಕೆ ನಿಂಗೊಬ್ಬ ಜೊತೆಗಾರ ಸಿಕ್ಕಿದಾನೆ ಅಂತ ಸಂತೋಷಪಡಬೇಕು..

"ಮತ್ತೆ........ ಮತ್ತೆ ....ನಮ್ಮಪ್ಪ ಒಂದು ವರ್ಷದಿಂದ .... ಮನೇಗೇ ಬಂದಿಲ್ಲ......ಅದಕ್ಕೇ "

ಸ್ವಲ್ಪ ಆಘಾತಗೊಂಡ ಮಹಿಳೆ, ಅದನ್ನು ತೋರಿಸಿಕೊಳ್ಳದೆ,

"ಅದಕ್ಕೆ ನೀನ್ಯಾಕೆ ಅಳಬೇಕು ?.......ನಿಮ್ಮಮ್ಮ ಅದನ್ನೆಲ್ಲಾ ನೋಡ್ಕೊತಾಳೆ ......ಸುಮ್ನಿರು "

"ಊಂs.......ಊಂs......ಮತ್ತೇ...... ಮತ್ತೇ..........ಅಪ್ಪ ಮನೇಗೆ ಬಂದಾಗ.........ಮನೇಲಿ ಏನು ವ್ಯತ್ಯಾಸವಾಗಿದ್ರೂ, ಅದಕ್ಕೆಲ್ಲಾ ನೀನೇ ಜವಾಬ್ದಾರ ಅಂತ ನನ್ನೇ ಬೈಯ್ಯೋದು......ಊಂs........ಊಂs

ಭಾಮಿನಿಯರ ಷಟ್ಪದಿ

ಶಿವು

ಗೆಳತಿ ಮುಖವನು ನೋಡಿ ಶಾಂತಳು
ಬಳಲಿ ಸೊರಗಿಹ ಸುಮುಖ ಕರೆಯುತ
ಕೆಳಗೆ ಪೇಳಿಹ ಮಾತಿನಿಂದಲಿ ಪ್ರಶ್ನೆ ಕೇಳಿದಳು ।
"ಹೇಳೆ ಬೇಗನೆ ತರಳೆ ಕೋಮಲೆ
ಕೇಳುತಿರುವೆನು ನಿನ್ನ ದುಗುಡಕೆ
ಬಾಳ ಭಂಟನ ಖೂಳನಡೆತೆಯು ನಿಜಕು ಕಾರಣವೆ ? "

"ಬೋರು ಹೊಡೆದಿದೆ ಶಾಂತು ಮಾನಿನಿ
ಕೇರು ಮಾಡನು ನನ್ನ ಇನಿಯನು
ಮೂರು ಮಕ್ಕಳ ಹಡೆದು ಕೊಟ್ಟರು ಗಂಡ ಪ್ರೇಮಿಸನು ! "
"ನಾರಿ ಮುದದಲಿ ಶಿವಗೆ ವಂದಿಸು
ಚೀರು ಮೇಲಕೆ * ! ಪ್ರೇಮ ವಿಲ್ಲದೆ
ಮೂರು ಹಡೆದಿಹೆ, ಪ್ರೇಮಿಸಿದ್ದರೆ ನಿನ್ನ ಗತಿಯೇನು ? "

(* Cheer up !)

ಫೀಮೇಲ್ ಬಾಯ್

ಗೌತಮ

'ಓ' ಅಂದರೆ 'ರೋ' ಅನ್ನೋಕೆ ಬಾರದಿದ್ದವರು ಇಂದು ದೊಡ್ಡ ದೊಡ್ಡ ಭಾಷಣ ಬಗಿಯೋ ಹಾಗಾಗಿರೋದನ್ನ ನೋಡಿದ್ದೀನಿ. ಎರಡೆರಡಲಿ ನಾಲ್ಕು ಎಂದು ಹೇಳೋಕೂ ಗೊತ್ತಿಲ್ಲದಿದ್ದವರು ಇಂದು ಮ್ಯಾಥೆಮ್ಯಾಟಿಕ್ಸ್ ಹೇಳಿಕೊಡ್ತಾ ದುಡ್ಡನ್ನು ಮಿಂಟ್ ಮಾಡ್ತಿರೋರನ್ನ ಕಂಡಿದ್ದೀನಿ. ಇತ್ತೀಚೆಗಷ್ಟೇ ಅಂಥ ಕೆಲವರ ಮನೆಗಳನ್ನ ರೇಯ್ಡ್ ಮಾಡಿದ್ದು ಬೇರೆ ವಿಷಯ ಅಂತಿಟ್ಟುಕೊಳ್ಳಿ.

ಇದನ್ನೆಲ್ಲ ಯಾಕೆ ಹೇಳ್ತಿದೀನಿ ಅಂದರೆ, 'ಒಡವಂ ಬಲ್ಲಿದನಾಗನೇ. ಎಳೆಗರುವುಂ ಎತ್ತಾಗದೇ, ಅನ್ನೋ ಸೋಮೇಶ್ವರ ಶತಕವನ್ನು ಜ್ಞಾಪಿಸಿಕೊಳ್ಳೋಕೆ. ಆ ಪುಣ್ಯಾತ್ಮ ಹೇಳಿದಂತೆ, ಇಂಗ್ಲಿಷ್ ಅರಿಯದ ಇಂದಿನ ಶಾಸಕ ಶಾಸಕಿಯರು ನಾಳಿನ ಮುಖ್ಯಮಂತ್ರಿ ಆಗಬಹುದು. ಎಷ್ಟೋ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಾದಮೇಲೂ ಇಂಗ್ಲಿಷ್ ಕಲಿಯಲಿಲ್ಲ. ಉದಾಹರಣೆಗೆ 'ಪಾರ್ಕಲಾಂ' ಇಂಗ್ಲಿಷ್ ಕಲಿಯದೆಯೂ ಮುಖ್ಯಮಂತ್ರಿಯಾಗಿ ಯಶಸ್ವಿಯಾಗಿ ಆಡಳಿತ ನಡೆಸಿದರೆಂಬ ವಿಷಯುವನ್ನು ಹೇಳಿದರೆ, ಎಲ್ಲಿ ಇವರೂ ಇಂಗ್ಲಿಷ್ ಕಲಿಯುವ ಆಸೆಯನ್ನೂ ಬಿಟ್ಟುಬಿಡುವರೋ ಎಂಬ ಭಯ! ಇರಲಿ.

ಅಲ್ಲೀವರೆಗೂ, ಅಂದರೆ ಅವರು ಮುಖ್ಯಮಂತ್ರಿಗಳಾಗುವವರೆಗೂ, ಸದನದಲ್ಲಿ ಇಂಥವರು ನಗೆ ಬುಗ್ಗೆಗಳನ್ನೇಳಿಸುತ್ತಿರುತ್ತಾರೆ. ಆಗಾಗ ನಗೆಯ ಅಲೆಗಳು ಪಳಿಬೀಳುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ಪರ್ಮನೆಂಟಾಗಿ ಯಾಕೆ ಒಬ್ಬ ಹಾಸ್ಯಲೇಖಕನನ್ನು ಸದನದ ಸದಸ್ಯನನ್ನಾಗಿ ನೇಮಿಸಿಕೊಳ್ಳಬಾರದು ಎಂಬುದು ನಕ್ಕುನಲಿಯಬೇಕೆಂದು ಆಶಿಸುವ ಪ್ರತಿಯೊಬ್ಬ ಶಾಸಕರ ಪ್ರಶ್ನೆ ಹಾಗೂ ಆಶಯ. ಈ ದೃಷ್ಟಿಯಲ್ಲಿ ಶಾಸಕರೆಲ್ಲ ಒಂದು ತೀರ್ಮಾನಕ್ಕೆ ಬರಬಹುದು. ಅವರ, ಅಂದರೆ, ಹಾಸ್ಯ ಲೇಖನ ಕೆಲಸ ಏನಪ್ಪ ಎಂದರೆ. ಪದಗಳನ್ನು ತಿರುಚಿ, ಪಲ್ಟಿ ಹೊಡೆಸಿ

ಹೊಸ ಅರ್ಥಗಳನ್ನು ಕೊಟ್ಟು 'ಪನ್' ಮಾಡುವ್ರದರ ಮೂಲಕ FUN ಮಾಡುತ್ತಾ, ಶಾಸಕರನ್ನೆಲ್ಲಾ ನಗೆಗಡಲಿನಲ್ಲಿ ತೇಲಿಸುತ್ತಿರುವುದು. ಇದರಿಂದ ಒಂದಂತೂ ಗ್ಯಾರಂಟಿಯಾಗುತ್ತೆ, ಅದೆಂದರೆ – ಸದನದಲ್ಲಿ ಹೊಡೆದಾಟ ಬಡಿದಾಟ ಗಳು ಪೂರ್ತಿ ನಿಂತು ಹೋಗುತ್ತೆ.

ಈ ರೀತಿ ಸದಸ್ಯತ್ವವನ್ನು ಯಾರಿಗೂ ನೀಡಬಾರದೆಂದು ತೀರ್ಮಾನಿಸಿ ದರೆ, ಹೀಗೂ ಮಾಡಬಹುದು. ಒಂದೊಂದುದಿನ ಒಬ್ಬೊಬ್ಬ ಸದಸ್ಯರಿಗೆ ಎರಡೊ, ಮೂರೋ, ನಾಲ್ಕೊ ನಗೆ ತುಣುಕುಗಳನ್ನು ಬರೆದುಕೊಟ್ಟು ಸಮಯ ನೋಡಿ ಅವುಗಳನ್ನು ಹಾರಿಸುವಂತೆ ನಿರ್ದೇಶಿಸುವುದು. ಅಥವಾ ಈ ಹಾಸ್ಯದ ತುಣುಕುಗಳನ್ನು ಉಪಯೋಗಿಸಲು ಅನುವಾಗುವಂತೆ ಚರ್ಚೆಯ ದಿಕ್ಕನ್ನು ತಮ್ಮತ್ತ ತಿರುಗಿಸಿಕೊಳ್ಳುವಂತೆ ನಿರ್ದೇಶಿಸುವುದು. ಅದೇನೂ ಅಂಥ ಸುಲಭದ ಕೆಲಸವಲ್ಲ.

ಆದರೆ, ಇವೆಲ್ಲ ನೆರವೇರುವವರೆಗೂ ಆಗಾಗ ಹಾಸ್ಯದ ಚಟಾಕಿ ತಂತಾನೆ ಉತ್ಪತ್ತಿಯಾಗಿ (ಅಂದರೆ, ಹಾರಿಸಿದವರ ಅರಿವಿಗೆ ಬಾರದಂತೆ) ಸ್ಫೋಟಿಸುತ್ತಿ ರುತ್ತದೆ.

ಅಂಥ ಒಂದು ಚಿಕ್ಕ ಚುಟುಕ ಹೇಗೆ ಹಾರಿತೆಂದು ತಿಳಿಸಿಬಿಡುವೆ. ಒಬ್ಬರಿಗೆ ಕೆಲಸದವಳು ಬೇಕಾಗಿತ್ತಂತೆ. ಆದರೆ, ಬರುತ್ತಿದ್ದವರೆಲ್ಲ ಕೆಲಸದ ಹುಡುಗರೇ, ಅವರನ್ನು ಕರೆಯುತ್ತಿದ್ದುದು 'ರೂಂ ಬಾಯ್'ಗಳೆಂದು. ಸಹಜವಲ್ಲವೇ ? 'ಕೆಲಸದವಳು ಬೇಕು' ಅಂತ ಕನ್ನಡದಲ್ಲಿ ಕೇಳೋದು ಅವಮಾನವಲ್ಲವೇ ? ಇಂಗ್ಲಿಷನಲ್ಲಿ ಕೇಳಿದರೆ ಎಷ್ಟು ಚನ್ನಾಗಿರುತ್ತೆ ? ! ಆದರೆ ಇಂಗ್ಲಿಷಿನಲ್ಲಿ ಹೇಳೋಕೆ ಬರೋಲ್ವಲ್ಲ. ನಿಧಾನವಾಗಿ ಯೋಚನೆ ಮಾಡಿಯೋ. ಅಕ್ಕ ಪಕ್ಕದದವನ್ನೊ ಕೇಳಿ ಹೇಳುವುದಕ್ಕೆ ಸಮಯದ ಅಭಾವ. ಬೇಗ ನಿರ್ಧರಿಸ ಬೇಕು. ಹೊಳೇದೇಬಿಟ್ಟಿತು. 'ಫಿಮೇಲ್ ರೂಂ ಬಾಯ್' ಹೌದು ಅದೇ ಬೆಸ್ಟ್ ವರ್ಡ್ ಅನ್ನಿಸಿತು.. ಬಾಯಿಂದ ಬಂದೂ ಬಿಟ್ಟಿತು. ಎಲ್ಲಿರೂ ನಗೆ ಡಗಲಲ್ಲಿ ಮುಳುಗಿಹೋದರು.

ಬಾಯಿತಪ್ಪಿ 'ಪಿ ಮೇಲ್ ಬಾಯ್' ಎಂದು ತಿದ್ದಿದ್ದಿದ್ದರೆ, ಎಲ್ಲರೂ ತೇಲು ತ್ತಿದ್ದರೋ ಏನೋ ?

ನಮ್ಮದಿದು ಸರಕಾರ ಲೌಕಿಕ
ಮಾತಿನಾ ದರಬಾರ ಅಲೌಕಿಕ

ಡಾ॥ ಶಿವರಾಮ ಕಾರಂತ

ಕಂಡಿಲ್ಲವೇ ನೀವು ಪುಂಡರೆಲ್ಲರು ಕೂಡಿ
ಬಂಡಾಯವೆದ್ದು ಬಾಬರಿ ಮಜೀದಿ ಕೆಡೆಯೆ
ನಮ್ಮವರು ಖಂಡುತುಂಡಾಗಿ ತೆಗೆದ ಉದ್ಗಾರ !
ಆವೆ ಜನರು ಅಲೌಕಿಕರು ಯಾಕೆ ಗೊತ್ತೇ ?
ನೆರೆಪ್ರಾಂತ ಕಾಶ್ಮೀರವನು ಪಾಕಿಗಳು ಹೊಕ್ಕು
ಹಿಂಡಾಗಿ ಉರುಳಿಸಲು ದೇಗುಲ ಸಮಸ್ತ
ಭಂಡ ಕಾರ್ಯವ ಕೇಳಿ ಷಂಡರಾದರು ಸುಸ್ತು !
ಹಿಂದುಗಳು ಎಂಬವರು ಉದಾರ ಹೃದಯಿಗಳು ;
ಹಿಂದಾದರೂ ಹಾಗೆ, ಎಂದಾದರೂ ಹಾಗೆ
ದಿಟ್ಟ ಧೀಮಂತರು. ಜಿಹ್ವಾ ಪಕ್ಷಪಾತಿಗಳು
"ಯಾಕಯ್ಯ ಹಾಗೆಂಬೆ ? ತಲೆ ಹರಟೆ ನಿನಗೆ !
ನೀನಿಹೆಯ ನಾಸ್ತಿಕನು ; ಚಾರುವಾಕನ ಶಿಷ್ಯ !
ನಾವೆಷ್ಟೊಷ್ಟೋ ದೇವರ ನಂಬಿ ಬಂದ ಜನರು
ನೀ ಒಬ್ಬನೇ ಒಬ್ಬನನು ಒಪ್ಪದಿಹ ಪಾಮರ
ನಿನಗೇಕೀ ತಲೆಹರಟೆ ಮುಚ್ಚು ಬಾಯಿ !"
ನಾನೋ ! ಗೊತ್ತಿಲ್ಲದನು ಎಂದೆಂದು ನಂಬದನು
ಮುಂದಿಲ್ಲ ನನ್ನಲಿ ವಾದ ; ಆಯ್ತು ಪ್ರಮಾದ !
ಕೇಳಿಲ್ಲ ಪೇಳುವೆನು ವಾಸ್ತವಿಕ ಇತಿಹಾಸ
ಧರೆಯ ನರರಲಿ ಕೆಲಕು ಆಜನ್ಮವಾಗಿ
ಪಡೆದು ಬಂದರು ಪರರ ಧರ್ಮಗಳನು
ಖಂಡಿಸುವ ದಂಡಿಸುವ ಹಕ್ಕುಗಳನು
ನನನಿ ನಗೆ ದೊರೆಯುದದು—ಆಜನ್ಮ ಪೆದ್ದ !
ಭಾರತದ ಪ್ರಜೆಗಳಿಗೆ ಆ ವಿಧಿಯು ಬದ್ಧ

ಸೀಗೆಕಾಯಿಪುಡಿ ತಂದ ಅವಾಂತರ

ಸುಬ್ರಹ್ಮಣ್ಯ

ಈ ಕಳೆದ ಮೂವತ್ತು ನಲವತ್ತು ವರ್ಷಗಳಲ್ಲಿ ಭಾರತೀಯರು ಪಾಶ್ಚಾತ್ಯದೇಶಗಳಿಗೆ ವಲಸೆಹೋಗಿ ನೆಲಸುವುದು ಸರ್ವಸಾಧಾರಣವಾಗಿದೆ. ಅಲ್ಲಿ ನೆಲಸಿರುವ ಹಲವಾರು ಸಾವಿರಾರು ಭಾರತೀಯರು ತಮ್ಮೊಡನೆ ತಮ್ಮ ನೆಚ್ಚಿನ ಊಟ ಉಪಹಾರಗಳಿಗೆ. ಮತ್ತಿತರ ಜೀವನಾವಶ್ಯಕತೆಗಳಿಗೆ ತಮ್ಮ ನೂತನ ವಾಸ್ತವ್ಯದ ನಾಡಿನಲ್ಲಿ ಅನುಕೂಲವಾದ ಪರಿಸರವನ್ನು ಕಲ್ಪಿಸಿದ್ದಾರೆ. ಈ ಕಾರಣದಿಂದ ಈಗ ಯಾವ ಭಾರತೀಯನೂ ತನ್ನ ಇಷ್ಟದ ತಿಂಡಿ ತಿನಿಸುಗಳಿಂದ ಮತ್ತು ಇತರ ಪರಿಕರಗಳಿಂದ ವಂಚಿತನಾಗ ಬೇಕಾದ ಕಾರಣವಿಲ್ಲ,

ನಾನು ಬರೆಯುತ್ತಿರುವ ಪ್ರಸಂಗ ಮೂವ್ವತ್ತು ವರ್ಷಗಳಿಗಿಂತಲೂ ಹಿಂದಿನದು ನಾನಾಗ ಮೊದಲಬಾರಿಗೆ ಇಂಗ್ಲೆಂಡಿಗೆ ಕಾರ್ಯನಿಮಿತ್ತ ಒಂದು ವರ್ಷದ ಅವಧಿಗೆ ಹೋಗಬೇಕಾಯಿತು. ಶುಭಪ್ರಯಾಣವನ್ನು ಕೋರಲು ಬಂದ ಶ್ರೀವೈಷ್ಣವ ಹಿರಿಯರು ನನಗೊಂದು ವಿನಂತಿ ಮಾಡಿದರು. "ನೀವು ಇಂಗ್ಲೆಂಡಿಗೆ ಹೋಗುವಾಗ ನನಗೊಂದು ಉಪಕಾರಮಾಡಬೇಕು. ನನ್ನ ಮಗಳು ಅಳಿಯ ಇಂಗ್ಲೆಂಡಿನಲ್ಲಿದ್ದಾರೆ. ಅವರಿಗೆ ಗೋಕುಲಾಷ್ಟಮಿಯ ತಿಂಡಿಯ ಸಣ್ಣ ಪೊಟ್ಟಣವನ್ನು ನೀವು ತಲುಪಿಸಬೇಕು. ಅದರೊಡನೆ ಒಂದು ಶೀಷೆ ಅಭ್ಯಂಗನದ ತೈಲವನ್ನು ನೀವು ಒಯ್ದರೆ ನಾನು ಉಪಕೃತ ನಾಗುತ್ತೇನೆ, ನನ್ನ ಮಗಳು ಎಣ್ಣೆನೀರಿನ ಸ್ನಾನಮಾಡಿ ಬಹುದಿನಗಳಾದ್ದರಿಂದ ನನ್ನ ಹೆಂಡತಿ ಆತಂಕ ಪಟ್ಟಿದ್ದಾಳೆ" ಎಂದರು. ಈ ವಿನಂತಿಗೆ ನಾನು ಸಂಕೋಚದಿಂದ ಒಪ್ಪಬೇಕಾಯಿತು. ಗೋಕುಲಾಷ್ಟಮಿಯ ತಿಂಡಿಯ ಪೊಟ್ಟಣವನ್ನೇನೋ ಕಷ್ಟಪಟ್ಟು ಕೈಪೆಟ್ಟಿಗೆಯಲ್ಲಿ ಜಾಗಮಾಡಿ ಇಡಲು ಸಾಧ್ಯವಾಯಿತು. ಆದರೆ ಅದಕ್ಕೆ ನಾಲ್ಕಾರು ಹೊದಿಕೆ ಪಾಲಿಥೀನ್ ಹಾಕ ಬೇಕಾಯಿತು. ಇದಿಲ್ಲದೆ ನನ್ನ ಕಾಗದ ಪತ್ರಗಳು ಕೃಷ್ಣನ ನವನೀತದ ಪರಿಣಾಮವನ್ನು ತೋರಿಸುತ್ತಿದ್ದವು. ಆದರೆ ಅಭ್ಯಂಗನ ತೈಲದ ಶೀಷೆಗೆ ಜಾಗ ಮಾಡುವುದು ಹೇಗೆ? ನನ್ನ ಮಿತ್ರರು ಅವರ ಮಗಳು ಬಹುದಿನದ ವಿದೇಶವಾಸದಿಂದ ಅಭ್ಯಂಗನದಿಂದ ವಂಚಿತಳಾಗಿದ್ದರಿಂದ. ಭಾರೀ ಶೀಷೆಯನ್ನೇ ಕಳುಹಿಸಿದ್ದರು. ಈ ವಸ್ತುವಿಗೆ ನನ್ನ ಕೈಪೆಟ್ಟಿಗೆಯುಲ್ಲಿ ಜಾಗಮಾಡುವ ಹಾಗಿರಲಿಲ್ಲ. ಇದನ್ನು ನನ್ನ ಬಟ್ಟೆಗಳನ್ನಿಟ್ಟಿದ್ದ ದೊಡ್ಡ ಪೆಟ್ಟಿಗೆಯಲ್ಲೇ ಇಡಬೇಕು

ಎನ್ನುವ ನಿರ್ಣಯಕ್ಕೆ ಬಂದಾಯಿತು. ಆದರೆ ಈ ತೈಲ. ಶೀಷೆ ಸೋರಿದಾಗ, ಹೊರಗೆ ಬಂದರೆ ನನ್ನ ಬಟ್ಟೆಗಳ ಗತಿ ? ಒಂದು ವರ್ಷದ ಇಂಗ್ಲೆಂಡ್ ವಾಸಕ್ಕೆ ಬೇಕಾದ ಬಟ್ಟೆಗಳನ್ನೆಲ್ಲಾ ನನ್ನ ಅತ್ತಿಗೆ ದೊಡ್ಡ ಪೆಟ್ಟಿಗೆಯಲ್ಲಿ ಒಪ್ಪವಾಡಿದ್ದರು. ಈಗ ಈ ಶೀಷೆಯನ್ನು ಅದರಲ್ಲಿಟ್ಟರೆ. ನನ್ನಬಟ್ಟೆಗಳ ಭವಿಷ್ಯವೇನು ಎನ್ನುವ ಆತಂಕ ನನ್ನ ಮನಸ್ಸನ್ನು ತಿನ್ನುತ್ತಿತ್ತು. ಸ್ನೇಹದ ಸಂಕೋಚದಿಂದ ನನಗೆ ಈ ಧರ್ಮ-ಸಂಕಟ ಬಾಧಿಸುತ್ತಿತು. ಅಷ್ಟದಲ್ಲಿ ನನ್ನ ಅತ್ತಿಗೆಯೇ ನನಗೆ ನೈತಿಕ ಬೆಂಬಲವನ್ನು ಕೊಟ್ಟರು. ಹೇಗಿದ್ದರೂ ಸ್ನೇಹಿತರು ಕೊಟ್ಟ ಎರಡು ವಸ್ತುಗಳಲ್ಲಿ ಒಂದನ್ನು ನಾನು ತೆಗದು ಕೊಂಡು ಹೋಗುತ್ತಿರುವುದರಿಂದ, ಆ ಎಣ್ಣೆ ಶೀಷೆಯನ್ನು ಹಿಂದೆಬಿಟ್ಟರೆ ಅವರು ಹೆಚ್ಚು ತಪ್ಪು ತಿಳಿದು ಕೊಳ್ಳಲಾರರು ಎನ್ನುವುದು ಆವರ ಅಭಿಪ್ರಾಯ ವಾಗಿತ್ತು. ಅಂತೆಯೇ ಆ ಶೀಷೆಯನ್ನು ಬಿಟ್ಟು ಇಂಗ್ಲೆಂಡಿಗೆ ಹೋದದ್ದಾಯಿತು. ತಿಂಡಿಯ ಪೊಟ್ಟಣವನ್ನು ನನ್ನ ಸ್ನೇಹಿತರ ಆಳಿಯನಿಗೆ ಕೊಟ್ಟಾಗ ಅವರು ಕೃತಜ್ಞತೆ ಹೇಳಿ. ನನಗೆ ಈ ತೊಂದರೆ ಕೊಟ್ಟಿದ್ದಕ್ಕೆ ಅವರ ಮಾವನವರನ್ನು ದೂರಿದರು. ಇದರಿಂದ ಧೈರ್ಯಗೊಂಡನಾನು, ಭಾರತದಲ್ಲೇ ಬಿಡಬೇಕಾಗಿ ಬಂದ ಎಣ್ಣೆಯ ಶೀಷೆಯ ವಿಷಯ ಹೇಳಿ. ಅವರ ಹೆಂಡತಿಗೆ ಅಭ್ಯಂಗನದ ತೈಲ ಸಿಕ್ಕದಿದ್ದುದ್ದಕ್ಕಾಗಿ ನನ್ನ ಅನುತಾಪ ವ್ಯಕ್ತಪಡಿಸಿ ಕಾಲ್ಕಿತ್ತೆ.

ಇದಾದ ತರುಣದಲ್ಲಿ ನಾನು ಇಂಗ್ಲೆಂಡಿನಿಂದ ಜಿನೀವಾಗೆ ಹೋಗ ಬೇಕಾಯಿತು. ಅಲ್ಲಿನ ರೆಸ್ಟೋರೆಂಟಿನಲ್ಲಿ ಊಟ ಮಾಡುತ್ತಿದಾಗ ನನಗೊಬ್ಬ ಮಿತ್ರರು ಸಿಕ್ಕರು. ಅವರು ಮಲೇಷಿಯಾ ನಾಗರಿಕರಾಗಿದ್ದರೂ,ಮೂಲತಃದಕ್ಷಿಣ ಭಾರತೀಯರಾಗಿದ್ದರು ನಾನು ಭೇಟಿಮಾಡಿದ ಕಾಲದಲ್ಲಿ ಅವರು ಸಂಯುಕ್ತರಾಷ್ಟ್ರ ಸಂಸ್ಥೆಯ ಒಂದು ಅಂಗದಲ್ಲಿ ದೊಡ್ಡ ಹುದ್ದೆಯಲ್ಲಿದ್ದು ಜಿನಿವಾದಲ್ಲಿ ವಾಸವಾಗಿದ್ದರು. ನಾನೂ ಅವರು ಊಟದ ಸಮಯದಲ್ಲಿ ವಿದೇಶ ಪ್ರಯಾಣ ಮಾಡುವಾಗ ಒದಗುವ ಧರ್ಮಸಂಕಟ-ಗಳನ್ನು ಚರ್ಚಿಸುತ್ತಿದ್ದವು. ಅವರಿಗೆ ನಾನು ಮೇಲೆ ವಿವರಿಸಿದ ಸಂದರ್ಭವನ್ನು ತಿಳಿಸಿದಾಗ ತಮ್ಮ ಅನುಭವದಲ್ಲಿ ಆದ ಸಂಗತಿಯೊಂದನ್ನು ಹೇಳಿದರು,

ಅವರು ಕೌಲಾಲಂಪೂರಿನಿಂದ ಒಮ್ಮೆ ಲಂಡನ್‌ಗೆ ಬರಬೇಕಾಗಿತ್ತು. ಅವರ ವಿಮಾನ ಹಾಂಕಾಂಗ್ ಮೂಲಕ ಪ್ರಯಾಣ ಮಾಡುವದಾಗಿತ್ತು. ಈ ಸಂದರ್ಭದಲ್ಲಿ ನಮ್ಮ ಮಿತ್ರರ ತಂದೆಯವರು ಅವರಿಗೆ "ನನ್ನ ಸ್ನೇಹಿತನೊಬ್ಬ ಹಾಂಕಾಂಗ್ ನಿಂದ ಕಾಗದ ಬರೆದಿದ್ದಾನೆ. ಅವನ ಮಗಳು ಲಂಡನ್‌ನಲ್ಲಿ ಇದ್ದಾಳಂತೆ. ನೀನು ಲಂಡನ್‌ಗೆ ಹೋಗುವಾಗ ಹಾಂಗ್‌ಕಾಂಗ್ ಮಾರ್ಗವಾಗಿ ಹೋಗುತ್ತಿಯ, ಅಲ್ಲಿ ಅವರು ನಿನಗೆ ಒಂದು ಸೀಗೆಕಾಯಿಪುಡಿಯ ಪೊಟ್ಟಣವನ್ನು ಕೊಡುತ್ತಾರೆ – ನೀನು ಅದನ್ನು ಹಾಂಗ್‌ಕಾಂಗ್‌ನಲ್ಲಿ ಸಂಗ್ರಹಿಸಿ, ಅವನ ಮಗಳಿಗೆ ಲಂಡನ್‌ನಲ್ಲಿ ತಲುಪಿಸು. ನನ್ನ

ಸ್ನೇಹಿತನ ಹೆಂಡತಿ ತನ್ನ ಮಗಳು ತೈಲಾಭ್ಯಂಗನ ಮಾಡದೆ ಬಳಲಿರುವ ವಿಷಯ ಕಾತುರಳಾಗಿದಾಳೆ. ನೀನು ಇಷ್ಟಾದರೂ ಅವರಿಗೆ ಸಹಾಯ ಮಾಡು" ಎಂದನು. ನನ್ನ ಮಿತ್ರರು ಅವರ ತಂದೆಯವರಿಗೆ ದಾರಿಯ ಏರ್‌ಪೋರ್ಟಿನಲ್ಲಿ ವಸ್ತು ಸಂಗ್ರಹ-ಣೆಯ ಕಷ್ಟವನ್ನು ಅಪಾಯವನ್ನು ಒಣ್ಣಿಸಿದರು. ಅವರ ತಂದೆ ಇದನ್ನು ಕೇಳಿ ಕುಪಿತರಾಗಿ "ನಾನು ಇಷ್ಟು ಹೇಳಿದ ಮೇಲೇ ಈ ಅಲ್ಪಸಹಾಯವನ್ನು ಮಾಡಲಾರೆಯಾ ?" ಎಂದು ಮುನಿಸಿಕೊಂಡರು. ನನ್ನ ಮಿತ್ರರು ಅವರ ತಂದೆಯವರನ್ನು ತೃಪ್ತಿಪಡಿಸಲು ಹೂಗುಟ್ಟಿ ಒಪ್ಪಿಕೊಂಡರು.

ನನ್ನ ಮಿತ್ರನ ವಿಮಾನ ಕೌಲಾಲಂಪುರಿನಿಂದ ಹಾಂಗ್‌ಕಾಂಗ್‌ಗೆ ಬಂತು. ಇದು ನಡೆದದ್ದು ಸುಮಾರು 1959-60ರ ನಡುವಿನಲ್ಲಿ. ಆಗತಾನೆ ಹಾಂಗ್‌ಕಾಂಗ್ ನಿಂದ ಬಾಂಡುಂಗ್‌ಗೆ ಹೊರಟಿದ್ದ ವಿಮಾನವೊಂದು ಬಾಂಬ್ ಸ್ಫೋಟನೆಯಿಂದ, ಸಮುದ್ರ ದಲ್ಲಿ ಬಿದ್ದು ಅನೇಕ ಪ್ರಯಾಣಿಕರು ಅಸು ನೀಗಿದ್ದರು. ಆದ್ದರಿಂದ ಹಾಂಗ್‌ಕಾಂಗ್ ವಿಮಾಣ ನಿಲ್ದಾಣದಲ್ಲಿ ಭದ್ರತಾ ಮುನ್ನೆಚ್ಚರಿಕೆ ಕಟ್ಟುನಿಟ್ಟಾಗಿತ್ತು. ನನ್ನ ಮಿತ್ರರು ಭದ್ರತಾ ಅಧಿಕಾರಿಯೊಬ್ಬನಿಗೆ ತಾವು ಹಾಂಗ್‌ಕಾಂಗ್ ನಿಲ್ದಾಣದಲ್ಲಿ ಸಂಗ್ರಹಿಸ ಬೇಕಾಗಿದ್ದ ಪೊಟ್ಟಣದ ವಿಷಯ ಹೇಳಿದರು. ಆ ಅಧಿಕಾರಿ ಮೊದಲು ಇದಕ್ಕೆ ಒಪ್ಪ-ದಿದ್ದರೂ, ನನ್ನ ಮಿತ್ರನ ಒತ್ತಾಯದ ವಿನಂತಿಗೆ ಮಣಿದುಕಡೆಗೆ ಒಪ್ಪಿದ. ಆದರೆ ವಿಮಾನ ಹತ್ತುವ ಮೊದಲು ಮತ್ತೆ Security Check ಮಾಡಿಸಿ ಕೊಳ್ಳ ಬೇಕಾದ ಆಗತ್ಯತೆಯನ್ನು ಹೇಳಿದರು.

ಇಷ್ಟರಲ್ಲಿ ನನ್ನ ಮಿತ್ರರಿಗೆ ವಯಸ್ಸಾದ ಭಾರತೀಯರೊಬ್ಬರು Wave ಮಾಡುತ್ತಿರುವುದು ಕಂಡು ಬಂದಿತು. ಅವರೇ ತಮ್ಮ ತಂದೆಯ ಸ್ನೇಹಿತರೆಂದು ಗುರುತಿಸುವುದು ಕಷ್ಟವೇನು ಆಗಲಿಲ್ಲ. ನನ್ನ ಮಿತ್ರರು ಅವರ ಬಳಿ ಹೋದಾಗ ಅವರಿಗೆ ಭಯತರುವ ಆಶ್ಚರ್ಯವೊಂದು ಕಾದಿತ್ತು. ಆ ಮಹನೀಯರು ತಮ್ಮ ಕೈಯಲ್ಲಿ ಹುರಿಯಿಂದ ಸಡಿಲವಾಗಿ ಕಟ್ಟಿದ ನ್ಯೂಸ್ ಪೇಪರ್ ಪೊಟ್ಟಣವನ್ನು ಹಿಡಿ-ದಿದ್ದರು. ಅದರಲ್ಲಿ ಇದ್ದದ್ದು ಸೀಗೆಕಾಯಿಪುಡಿ ಎನ್ನುವ ವಿಷಯದಲ್ಲಿ ನನ್ನ ಮಿತ್ರರಿಗೆ ಅನುಮಾನ ಬರುವ ಹಾಗೇ ಇರಲಿಲ್ಲ. ಆ ಪೊಟ್ಟಣದ ಸ್ಥಿತಿ ಹಾಗಿತ್ತು ! ನನ್ನ ಮಿತ್ರರಿಗೆ ತಡೆಯಲಾರದಷ್ಟು ಕೋಪ ಬಂತು. ಆದರೆ ಅವರಿಗೆ ಯಾವುದಕ್ಕೂ ಕಾಲವ್ಯವಧಾನ ವಿರಲಿಲ್ಲ. ವಿಮಾನ ಪುನಃ ಹೊರಡುವ announcement ಮಾಡಿ ಆಗಿತ್ತು. ನನ್ನ ಮಿತ್ರರು ಆ ಪೊಟ್ಟಣವನ್ನು ಆ ವೃದ್ಧ ಮಹನೀಯರಿಂದ ತೆಗೆದು ಕೊಂಡು, ಪುನಃ Security Checkಗೆ ಬಂದರು.

ಈ ಹಿಂದಯೆ ಹಾಂಗ್‌ಕಾಂಗ್ ವಿಮಾನ ನಿಲ್ದಾಣದ ಭದ್ರತಾ ಮುನ್ನೆಚ್ಚರಿಕೆಯು ವಿಷಯ ಪ್ರಸ್ತಾಪಮಾಡಿದೆ. ಭದ್ರತಾ ಅಧಿಕಾರಿ ನನ್ನ ಮಿತ್ರರಿಂದ ಪೊಟ್ಟಣವನ್ನು ತೆಗೆದು ಕೊಂಡು. ಕಟ್ಟನ್ನು ಬಿಡಿಸಲು ಆರಂಭಿಸಿದ. ನನ್ನ ಮಿತ್ರರು ಪೊಟ್ಟಣವನ್ನು ಬಿಚ್ಚುಸುವುದು ಬೇಡವೆಂದು ಬೇಡಿಕೊಂಡರು. ಇದು ಆ ಅಧಿಕಾರಿಯ ಅನುಮಾನ ವನ್ನು ಹೆಚ್ಚಿಸಿತು. ಕಟ್ಟನ್ನು ಬಿಚ್ಚಿದ ಒಡನೆಯೇ ಸೀಗೆಕಾಯಿಪುಡಿ ತನ್ನ ಕಂಪನ್ನು ಪರಡಲಾರಂಭಿಸಿತು ! ಭದ್ರತಾ ಅಧಿಕಾರಿ ಸೀನಲಾರಂಭಿಸಿದ. ಅವನ ಹಿಂದಿದ್ದ ಕೆಲವು ಅಧಿಕಾರಿಗಳು ಕಣ್ಣುಜ್ಜಿಕೊಳ್ಳಲು ಶುರುಮಾಡಿದರು. ಆ ಘಾಟು ವಾಸನೆ ಭದ್ರತಾಪಡೆಯನ್ನು ಪ್ರಕ್ಷುಬ್ಧ ಗೊಳಿಸಿತು. ಹಲವಾರು ಅಧಿಕಾರಿಗಳು ನನ್ನ ಮಿತ್ರ–ರನ್ನು ಸುತ್ತುವರಿದರು. ಆ ಪೊಟ್ಟಣದಲ್ಲಿರುವ "ಆ ಸ್ಫೋಟನಾ" ವಸ್ತುವನ್ನು ನನ್ನ ಮಿತ್ರರು ವಿದ್ರೋಹಿಕಾರ್ಯಕ್ಕೆ ಉಪಯೋಗಿಸಲು ಹೊರಟಿರುವರೆಂದು ಅವರಿಗೆ ಖಾತ್ರಿಯಾಗಿತ್ತು, ನನ್ನ ಮಿತ್ರರನ್ನು ಒಡನೆಯೇ ಭಧ್ರತಾಪಡೆಯ ಮುಖ್ಯ ಅಧಿಕಾರಿಯ ಕಚೇರಿಗೆ ಕರೆದೊಯ್ಯಲಾಯಿತು. ನನ್ನ ಮಿತ್ರರು ಆ ಅಧಿಕಾರಿಗೆ ಸೀಗೆ-ಕಾಯಿಪುಡಿಯನ್ನು ಹೇಗೆ ಸೋಪಿನ ಬದಲು ಉಪಯೋಗಿಸುವರೆಂದೂ, ತೈಲಾ-ಭ್ಯಂಗನದಲ್ಲಿ ಹೇಗೆ ಇದಕ್ಕೆ ವಿಶಿಷ್ಟಸ್ಥಾನ ವಿದೆಯೆಂದೂ ವಿವರಣೆ ಕೊಡಲು ಪ್ರಯತ್ನಿಸಿದರು. ಆ ಅಧಿಕಾರಿಯ ಮುಖದ ಚಹರೆಯಿಂದಲೇ ನನ್ನ ಮಿತ್ರರಿಗೆ ಅರಿವಾಯಿತು – ಆ ಅಧಿಕಾರಿ ಇದನ್ನಾವುದನ್ನೂ ನಂಬುತ್ತಿಲ್ಲವೆಂದು. ನನ್ನ ಮಿತ್ರರಿಗೆ ತಕ್ಷಣವೇ ಭಯವಾಯಿತು. ತಾವು ಪ್ರಯಾಣ ಮುಂದುವರೆಸುವುದನ್ನು ಭದ್ರತಾ ಅಧಿಕಾರಿ ತಡೆಯುವುದಲ್ಲದೇ, ವಿದ್ರೋಹಿ ಚಟುವಟಿಕೆಯ ಗುಮಾನಿಯ ಮೇಲೆ ತಾವು ಬಂಧನಕೊಳ್ಳಲ್ಪಡುವ ಸಂಭವವೂ ಇದೆಯೆಂದು ಅರಿವಾಯಿತು – ಆಗ ಸಮಯ ಸ್ಫೂರ್ತಿಯಿಂದ ನನ್ನ ಮಿತ್ರರು ಅಧಿಕಾರಿಗೆ "ಸ್ವಾಮಿ. ನಾನು ವಿದ್ರೋಹಿ-ಯಲ್ಲ. ಇದೋ ನೋಡಿ ನನ್ನ Diplomatic Passport ನಾನು ಸಂಯುಕ್ತ ರಾಷ್ಟ್ರ ಸಂಸ್ಥೆಯ ಅಧಿಕಾರಿ - ನನಗೆ ತುರ್ತು ಕೆಲಸವಿರುವುದರಿಂದ ಈಗಲೇ ಪ್ರಯಾಣ ಮಾಡಲು ಅವಕಾಶಕೊಡಿ – ಈ ಪೊಟ್ಟಣದಲ್ಲಿರುವ ವಸ್ತುವಿನಲ್ಲಿ ನಿಮಗೆ ಅನುಮಾನ ವಿದ್ದರೆ ನಾನಿದನ್ನು ಇಲ್ಲೇ ಬಿಟ್ಟು ಹೋಗುತ್ತೇನೆ" ಎಂದು ವಿನಂತಿ ಮಾಡಿ ಕೊಂಡರು. ಯಾವ ದೈವ ಪ್ರಭಾವದಿಂದಲೋ, ಆ ಅಧಿಕಾರಿ ತೃಪ್ತಿಗೊಂಡು ನನ್ನ ಮಿತ್ರರನ್ನು ಪ್ರಯಾಣ ಮುಂದುವರಿಸಲು ಬಿಟ್ಟ. ಮಿತ್ರರು ಹೇಳಿದ ಈ ಪ್ರಸಂಗ ಕೇಳಿ, ನಮ್ಮ ಹೈಜಾಕಿಂಗ್ ಪ್ರಭೃತಿಗಳು ಈ ಸುಲಭೋಪಾಯವನ್ನೇಕೆ ಇನ್ನೂ ಬಳಸಿಲ್ಲ ಎಂಬ ಯೋಚನೆ ತಲೆಹತ್ತಿದೆ !

ಅವಳಿ ಜವಳಿ–ಒಂದು ಕೇಸ್ ಸ್ಟಡಿ

ಸೀ. ಆರ್. ಸತ್ಯ

ನಾನೂ. ಗೋಪಿ, ಅವಳಿ ಜವಳಿಗಳು. ಇಬ್ಬರೂ ನೋಡೋಕ್ಕೆ ಒಂದೇ ತರಹ, ಮಾತನಾಡೋದೂ ಒಂದೇ ತರಹ. ಒಂದೇ ಬಣ್ಣ. ಒಂದೇ ತೂಕ, ನಾವು ಚಿಕ್ಕವರಾಗಿದ್ದಾಗ ನಮ್ಮ ಪಕ್ಕದ ಮನೆಯಾಕೆ ನಮ್ಮ ಅಮ್ಮನಕೈಲಿ ಮಾತಾಡ್ತಾ "ಇವರಿಬ್ಬರಲ್ಲಿ ಯಾರು ಯಾರ್‍ಯಾರು ಅಂತ ನಿಮಗೆ ಹೇಗೆ ಗೊತ್ತಾಗುತ್ತೆರೀ ?" ಅಂತ ಸಹಜವಾಗಿಯೇ ಕೇಳಿದ್ದರಂತೆ. ಅದಕ್ಕೆ ನಮ್ಮ ಅಮ್ಮ "ನನಗೂ ಸ್ವಲ್ಪ ಕಷ್ಟಾನೇ ಕಣ್ರಿ. ಈಗ ಸಧ್ಯಕ್ಕೆ ನನಗೂ ಅದೇ ಸಮಸ್ಯೇನೇ ಆಗಿದೆ. ಇವರಿಬ್ಬರಲ್ಲಿ ಒಂದೇ ಒಂದು ಪುಟ್ಟ ವ್ಯತ್ಯಾಸ ಅಂದರೆ ನಮ್ಮ ವಿಶ್ವ (ಅಂದರೆ ನಾನು) ಸ್ವಲ ಜಾಸ್ತಿ ತಿಂತಾನೆ. ಆದರಿಂದ ಊಟಕ್ಕೆ ಕೂತಾಗ ಯಾರು ವಿಶ್ವ ಯಾರು ಗೋಪಿ ಅಂತ ನಮಗೆಲ್ಲಾ ಗೊತ್ತಾಗುತ್ತೆ. ಅಂತ ಅಂದರಂತೆ.

ಆದರೆ ಈ ಪ್ರಕೃತಿ ನಿಯಮಕ್ಕೆ ಎಕ್ಸೆಪ್‌ಶನ್‌ಗಳು ಕಾಣಿಸೋಕ್ಕೆ ಶುರುವಾದ್ವು ನಾನು ಎಂಟನೇ ಕ್ಲಾಸಿನಲ್ಲಿ ಇದ್ದಾಗ, ನನಗೆ ತೀರಾ ಜ್ವರ ಬಂದು ಮಲಗಿದೆ ನಮ್ಮ ಅಮ್ಮ ನನಗೆ ಹಾರ್ಲಿಕ್ಸ್, ಹಣ್ಣಿನ ರಸ, ಬಿಸ್ಕಿಟ್ ಕೊಡ್ಬೇಕು ಅಂತ ಅಂದ ತಕ್ಷಣ ಗೋಪಿಗೂ ಜ್ವರ ಬಂದು ನನ್ನ ಬೆಡ್‌ನಲ್ಲೇ ನನ್ನ ಕಂಬಳಿ ಕೆಳಗೇ ಮಲಗಿಕೊಂಡ. ಸರಿ, ತಿಂಡಿ ಪಾನೀಯಗಳೆಲ್ಲಾ ನಮ್ಮಿಬ್ಬರಿಗೂ ಅಚ್ಚುಕಟ್ಟಾಗಿ ಆಯ್ತು. ಅವತ್ತು ರಾತ್ರಿ ನಮ್ಮಮ್ಮ ನಮ್ಮಿಬ್ಬರ ಮೇಲೆ ಕಂಬಳಿ ಹೊದ್ದಿಸಿ ಆ ಕಡೆ ಹೋದಾಗ ಗೋಪಿ ಕಂಬಳಿ ಒಳಗಿಂದ ಕಿಸಿಕಿಸಿ ಅಂತ ನಕ್ಕಿದ. ಏನಾಯ್ತೋ ?' ಅಂದೆ ಜ್ವರದ ತಾಪದಿಂದ "ನನಗೆ ಜ್ವರಾನೇ ಬಂದಿಲ್ಲ, ಅಮ್ಮ ಮೋಸ ಹೋದಳು" ಅಂತ ನಗೆಯಾಡಿದ. (ಈಗಲೂ ಅಷ್ಟೆ. ವಯಸ್ಸಾದರೂ ಹಾರ್ಲಿಕ್ಸ್ ಅಂದರೆ ಬಲೆ ಇಷ್ಟ.)

ಎಸ್ಸೆಸ್ಸೆಲ್ಸಿ ಪರೀಕ್ಷೇಗೆ ಕೂತಾಗ ನಮ್ಮನೇಲಿ ಒಂದು ರೀತಿ ಸಸ್ಪೆನ್ಸ್! ನಮ್ಮಪ್ಪ ಭಂಡ ಮುಂಡೇವು ಪಾಸಾದ್ರೆ ಎರಡೂ ಪಾಸಾಗುತ್ವೆ. ಇಲ್ಲದಿದ್ದರೆ ಎರಡೂ ಗೋತಾ ಹೊಡೆಯುತ್ವೆ ಅಂತ ಗೊಣಗಿಕೊಂಡರು. ಗೋಪಿ ಚೆನ್ನಾಗಿ ಓದಿದ್ದರೂ ಹುಚ್ಚುಚ್ಚಾಗಿ ಉತ್ತರ ಬರೆದು ಬಂದ. ನಾನು ಯಾಕೋ ಹೀಗ್ಮಾಡಿದೆ? ಅಂತ

ಕೇಳಿದೆ, ಹೇಗಿದ್ರೂ ನೀನು ಗ್ಯಾರಂಟಿ ನಾ ಪಾಸಾಗ್ತೀಯಲ್ಲಾ, ನೀನೊಬ್ಬ ಒಂದು ವರ್ಷ ಊಟ ತಿಂಡಿ ಮಾಡ್ಕೊಂಡು ಮನೇಲಿದ್ರೆ ನನ್ನಕೈಲಿ ಸಹಿಸೋಕ್ಕೆ ಆಗಲ್ಲ, ಅದಕ್ಕೆ ನಿನ್ನ ಜೊತೆ ನಾನು ಫೇಲ್ ಆಗ್ತೀನಿ." ಅಂತ ಅಂದ ! ನಮ್ಮಪ್ಪ ಗೊಣಗಿ-ಕೊಂಡ ಹಾಗೇ ಆಯ್ತು ಅನ್ನಿ. ಇಬ್ಬರೂ ಗೋತಾ ಹೊಡ್ವಿ.

ಅವಳಿ ಜವಳಿ ಅಂತ ಅನ್ನಿಸ್ಕೊಂಡ್ರೂ ಈ ಗೋಪಿಯ ಚುರುಕು ಬುದ್ಧಿ ದೇವರು ನನಗೆ ಕೊಡಲಿಲ್ಲ ನೋಡಿ ಕಾಲೇಜಿಗೆ ಹೋಗ್ತಿದ್ದಾಗ ನಾನು ಹಾಕ್ಕೊಳ್ಳೋ ಬಟ್ಟೇನ ಕ್ಲೀನಾಗಿ ಒಗೆದು ಇಸ್ತ್ರಿ ಮಾಡಿಟ್ಕೊಂಡಿದ್ರೆ, ಸ್ನಾನ ಮಾಡ್ಕೊಂಡು ಬರೋದ್ರಲ್ಲಿ ಅವನೇ ಅದನ್ನು ಹಾಕ್ಕೊಂಡು ಟ್ರಿಮ್ ಆಗ್ತಿದ್ದ. ನಾನು ಯಾರ್ಧತ್ರಾ-ನೋ ಕಾಪಿ ಮಾಡಿದ್ದ ಲ್ಯಾಬೋರೇಟರಿ ರೆಕಾರ್ಡ್‌ನೆಲ್ಲಾ ಅವನು ಲಪಟಾಯಿಸಿ ನನಗೆ ಖಾಲಿ ಪುಸ್ತಕ ಕೊಡ್ತಿದ್ದ. ನನ್ನ ಪಾಕೆಟ್ ಮನೀನ ಲಪಟಾಯಿಸಿ "ಡೋಂಟ್ ವರೀಮ್ಮಾ. ನಾವಿಬ್ರೂ ಒಂದೇ ಅಲ್ವೇನೋ ? " ಅಂತಿದ್ದ. ಆ ವರ್ಷ (ಸೆಕೆಂಡ್ ಬಿ. ಎ. ಕ್ಲಾಸಿನಲ್ಲಿದಾಗ) ಇಬ್ಬರೊ ಫೇಲ್ ಆಗಿ ಮನೇಲೇ ಇದ್ವಿ. ಕಾಲ ಕಳಿಯೋಕ್ಕೆ ಅಂತ ನಮ್ಮಪ್ಪ ನಮ್ಮಿಬ್ಬರಿಗೂ ಕರ್ನಾಟಕ ಸಂಗೀತ ಕಲಿಸುವುದಕ್ಕೆ ಅಂತ ಒಬ್ಬ ಮೇಡಂನ ಗೊತ್ತು ಮಾಡಿದ್ರು. ಆಕೆ ಸಸ ರಿರಿ ಗಗ ಮಮ ಅಂತ ಜೋರಾಗಿ ಹೇಳಿ ಆದರೆ ಗೋಪಿ ಬರೀ ತುಟಿ ಅಲ್ಲಾಡಿಸಿ ನನ್ನನ್ನು ಮಾತ್ರ ಕಷ್ಟಪಟ್ಟು ಹೇಳೋ ಹಾಗೆ ಮಾಡ್ತಿದ್ದ. (ಆದರೆ ಇಬ್ಬರೂ ಹೇಗೋ ಲಂಬೋದರ ಲಕುಮಿಕರ ಕಲಿತು ಕೊಂಡ್ವಿ ಅನ್ನಿ. ಒಂದು ದಿನ ಬೆಳಿಗ್ಗೆ ನಮ್ಮ ಮೇಡಂ ಜೊತೆಗೆ ನಾವಿಬ್ಬರೂ ಗಂಟಲು ಹರಿಯೋ ಹಾಗೆ ಲಂಬೋದರ ಶುರು ಮಾಡಿದಾಗ, ಅಕ್ಕ-ಪಕ್ಕದ ಮನೆಯವರು ಮೊಬೈಲ್ ಪೋಲಿಸಿಗೆ ಫೋನ್ ಮಾಡಿ ಗುಂಪಾಗಿ ಬಂದು ನಮ್ಮ ಪಾಠ ನಿಲ್ಲಿಸಿದರು. ಅನ್ನೋದು ಬೇರೇ ವಿಷಯ.)

ಗೋಪಿ ನನಗಿಂತ ಸ್ಮಾರ್ಟ್ ಅನ್ನೋಕ್ಕೆ ಇನ್ನೊಂದು ವಿಷಯ ಹೇಳ್ತೀನಿ, ಕೇಳಿ, ನಮ್ಮ ಕ್ಲಾಸಿನಲ್ಲೇ ಓದುತ್ತಿದ್ದ ಹುಡುಗಿ — ಲಾವಣ್ಯ, ಇವನ ಕಣ್ಣಿಗೆ ಬಿದ್ದಳು. ಅವಳ ಹಿಂದೇನೇ ಸ್ವಲ್ಪ ದಿವಸ ಓಡಾಡಿ ಅವಳ ಮನೆಯ ಮುಂದೇನೂ ಹೋಗಿ ಚುಡಾಯಿಸಿದನಂತೆ ಅವಳಪ್ಪ ಅವನ ಮೇಲೆ ರೇಗಿದ್ದಕ್ಕೆ ಅಂತ ಹಾಲಿಡೇಸ್‌ನಲ್ಲಿ ಅವಳಿಗೊಂದು ಲೌವ್-ಲೆಟರ್ ಕೊಡ್ರೋ ಅಂತ ನನಗೆ ಹೇಳಿದ. ನಾನು ಲೆಟರ್ ತೊಗೊಂಡು ಅವಳ ಮನೆಗೆ ಹೋದರೆ ನಾನೇ ಗೋಪಿ ಅಂತ ಅವಳಪ್ಪ ನನಗೆ ನಾಲ್ಕು ಏಟು ಕೊಡೋದಲ್ಲದೆ ನಾಯೀನೂ ಮೇಲೆಬಿಟ್ಟ ಇವತ್ತಿಗೂ ನನ್ನ ಕಾಲುಮೇಲೆ ಅದರ ಹಲ್ಲಿನ ಮಾರ್ಕುಗಳು ಹಾಗೇ ಇವೆ.

ಇನ್ನೊಂದು ದಿವಸ ಏನು ಮಾಡಿದ ಗೊತ್ತೆ ? ನಾನು ಯಾವುದೋ ಫ್ರೆಂಡ್

ಮನೇಗೆ ಅಂತ ಹೋಗಿ ಬರೋದು ಲೇಟಾಯ್ತು, ಹಸಿವು ಅಂತ ಅಡಿಗೆ ಮನೇಗೆ ಹೋದರೆ ನಮ್ಮಮ್ಮ "ಆಗಲೆ ಊಟ ಮಾಡಿದ್ಯಲ್ಲೋ?" ಅಂತ ಉದ್ಗಾರ ಎಳೆದರು. 'ಅರ್ಥವಾಯ್ತು!' ಅಂದೆ, ಗೋಪಿ ತನ್ನ ಊಟ ಹೊಡೆಯೋದಲ್ಲದೆ, ನನ್ನ ಬಟ್ಟೆ ಹಾಕ್ಕೊಂಡು ಬಂದು ನನ್ನ ಊಟಾನೂ ಲಪಟಾಯಿಸಿದ್ದ.

ಏನೋ ಇದೆಲ್ಲ ಹುಡುಗು ಬುದ್ಧಿ ಅಂತ್ಕೋತೀರೋ ಏನೋ, ಬೆಳೆದ ಮೇಲೆ ಏನಾಯ್ತು ಕೇಳಿ. ನನಗೂನೂ ಗೋಪಿಗೊನೂ ಮದುವೆಗಳೂ ಆಯ್ತು. (ಅಂದರೆ one each ಅಂತ) ಸಂಸಾರಾನೂ ಹೂಡಿದ್ವಿ. ನಾನು ನಮ್ಮೂರಿನಲ್ಲೇ ಇದ್ದ ರಾಮಾಂಜನೇಯ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆದೆ. ಗೋಪಿ ಪಕ್ಕದೂರಿನಲ್ಲಿದ್ದ ಲಕ್ಷ್ಮಣ ಕೋಆಪರೇಟಿವ್ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆದ. ಅವನಿಗೂ ಮೂರು ಮಕ್ಕಳೂ ಆಯ್ತು. ನನಗೂ ಮೂರು ಮಕ್ಕಳು. ನಾವಿಬ್ಬರೂ ಜೀವನದಲ್ಲಿ ಕೊನೇಗೂ ಸಮಾ ಆದ್ವಿ ಅಂತ ಸಮಾಧಾನ ಪಟ್ಕೊಂಡೆ. ಆದರೆ ಈ ಶಾಂತಿ ಸಮಾಧಾನ ಎಲ್ಲಾ ಇತ್ತೀಚೆಗೆ ಒಂದು ದಿನ ಒಡೆದು ಚೂರಾಯ್ತು. ಆವತ್ತು ಸಂಜೆ ಮಾರ್ಕೆಟಿಗೆ ತರಕಾರಿ ಕೊಂಡುಕೊಳ್ಳೋಕ್ಕೆ ಅಂತ ಹೋಗಿದ್ದೆ. ಹಿಂದಿನಿಂದ ಇಬ್ಬರು ದಢೂತಿಗಳು ನನ್ನ ತೋಳು ಹಿಡ್ಕೊಂಡು, "ಮಿ ಗೋಪಿನಾಥ್, ಯೂ ಆರ್ ಅಂಡರ್ ಅರೆಸ್ಟ್" ಅಂತ ಅಂದರು, ನಾನು, "ನಾನು ಗೋಪಿನಾಥ್ ಅಲ್ಲರೀ, ವಿಶ್ವನಾಥ್ ಅಂದೆ. "ಒಳ್ಳೆ ಜೋಕು" ಅಂತ ಇಬ್ಬರೂ ನಕ್ಕಿದರು. "ಏನು ವಿಷಯ? ಅಂತ ಕೇಳಿದೆ. "ಹರ್ಷದ್ ಮೆಹ್ತಾಸ್ಕ್ಯಾಮ್ ಕೇಸಿನಲ್ಲಿ ನಿಮ್ಮ ಬ್ಯಾಂಕೂ ಸೇರಿದೆ ಅದಕ್ಕೆ" ಅಂದರು. ಅವರಿಬ್ಬರೂ ಸಿ.ಬಿ.ಐ. ನವರು ಅಂತ ಅರ್ಥವಾಯ್ತು. ಅವರ ಪ್ರಶ್ನಾವಳಿ ಎಲ್ಲಾ ಮುಗಿದ ಮೇಲೇ ಲಾಯರ್ ಮೂಲಕ ಬಿಡಿಸಿಕೊಂಡು ಮನೆಗೆ ಬಂದೆ. ತಕ್ಷಣ ಟೆಲಿಫೋನ್ ಟ್ರಿಂಗ್ ಅಂತು, "ಹಲೋ?" ಅಂದೆ. "ನಾನು ಕಣೋ ಗೋಪಿ. ಸಾರಿನಪ್ಪ, ನನ್ನ ಬದಲು ನಿನ್ನ ಹಿಡ್ಕೊಂಡಿದ್ರಂತೆ ಸಿಬಿಐ ನವರು. ಒಂದು ವಿಧದಲ್ಲಿ ಒಳ್ಳೇದೇ ಆಯ್ತು ಬಿಡು " ಅಂತ ನಕ್ಕಿದ.

"ಯಾಕೋ?" ಅಂತ ಕೇಳಿದೆ ನೋವಿನಿಂದ.

"ನಿನ್ನ ಸತಾಯಿಸ್ತಾ ಇದ್ದಾಗ ನಮ್ಮ ಆಫೀಸಿನಲ್ಲಿದ್ದ ಎವಿಡೆನ್ಸ್‌ನೆಲ್ಲಾ ಬಚ್ಚಿಡೋಕ್ಕೆ ಸಮಯಾ ಸಿಕ್ತಲ್ಲ ಅದಕ್ಕೆ. ತುಂಬಾ ಥ್ಯಾಂಕ್ಸ್ ಕಣಪ್ಪ ಅಂತ ಅಂದ. ರ್‍ಯಾಸ್ಕಲ್. ಯಥಾಪ್ರಕಾರ ನನ್ನ ಮೇಲೆ ಇವನು one up ಅಂತ ರಿಸೀವರ್‌ನ ಕುಟ್ಟಿದೆ.

ಫ್ರೀ ಸೈಟ್

ಪಾ. ವೆಂ. ಸೂರಿ

ನಾನು ಆವತ್ತು ಬೆಳಿಗ್ಗೆ ಕನ್ನಡ ದಿನ ಪತ್ರಿಕೆ ಓದುತ್ತಿದ್ದೆ. ನನ್ನ ಮಗ ರವಿ ತಾನು ಮೊದಲು ತಂದಿದ್ದ ಇಂಗ್ಲಿಷ್ ದಿನ ಪತ್ರಿಕೆ ಓದುತ್ತಿದ್ದ. ಬೆಳಿಗ್ಗೆ ಹಾಸಿಗೆ ಮೇಲೆ ಕುಳಿತು ಎಲ್ಲರೂ ಬಿಸಿ ಬಿಸಿ ಕಾಫಿ ಕುಡೀತಾ ಬಹಳ ಉಲ್ಲಸಿತರಾಗಿದ್ದೆವು.

"ವಾ...ವ್ಹಾ...ನೋಡಣ್ಣ ಇಲ್ಲೀ....ಫ್ರೀ ಸೈಟ್ !" ಎಂದ ರವಿ ಇಂಗ್ಲಿಷ್ ಪೇಪರ್ ತೋರಿಸುತ್ತಾ;

"ಅಯೋ ಸುಮ್ನಿರು .. ನಿಮ್ಮಪ್ಪ ಈ ಜನ್ಮದಲ್ಲಿ ಮನೆ ಕಟ್ಸೋಲ್ಲ...... ಅವರು ಬಿ, ಡಿ. ಎ. ಗೂ ಅಪ್ಲಿಕೇಶನ್ ಹಾಕಲ್ಲ. ಯಾವ ಹೌಸಿಂಗ್ ಸೊಸೈಟಿಗೂ ಮೆಂಬರ್ ಆಲ್ಲಿಲ್ಲ" ಎಂದಳು ಪ್ರೇಮ.

"ಹಾಗ್ಯಾಕೆ ಅಡ್ತೀಯೋ...ಇನ್ನೇನು ರಿಟೈರ್‌ಮೆಂಟ್ ಆಗತ್ತೆಲ್ಲಾ ...ಒಂದು ಕಟ್ಟಿದ ಮನೇನೆ ತಗೋಳೋಣಾ" ಎಂದೆ ನಾನು.

"ತಗೋತೀರಿ, ತಗೋತೀರೀ ...ನಾ ಕಂಡಿಲ್ವೇ ನಿಮ್ಮನ್ನ... ನೀವು ಆಫೀಸಿಗೆ ಹೋಗ್ತಾ ಬರ್ತಾ ದಾರೀಲಿ ದಿನಾ ಒಂದೊಂದು ಇಟ್ಟಿಗೆ ಕದ್ದಿದ್ರು ನಿಮ್ಮ ಮೂವತ್ತೈದು ವರ್ಷ ಸರ್ವೀಸಿನಲ್ಲಿ ... ಇಷ್ಟು ಹೊತ್ತಿಗೆ "ಜುಂ" ಅಂತ ಒಂದು ಮನೇನ ಕಟ್ಟೇ ಬಿಡಬಹುವಾಗಿತ್ತು, ರವಿ, ಹೋಗಲಿ ಬಿಡಪ್ಪಾ ... ಅದೆಲ್ಲಿ ... ಫ್ರೀ ಸೈಟ್ ಅಂದ್ಯಲ್ಲಾ ಇವರ ಕೈಲಿ ಒಂದು ಆಪ್ಲಿಕೇಶನ್ ಹಾಕ್ಸು ಎಂದು ನಿಟ್ಟುಸಿರು ಬಿಟ್ಟಳು ಹೆನ್ನಾಕೆ.

"ಓ ... ಹ್ಹೊ...ಹ್ಹೋ...ಫ್ರೀ ಸೈಟ' ಅಂದ್ರೆ ... ಇಲ್ಲಿದೆ ಕೇಳಿ...

"ಏನು. ಓದಿ ಹೇಳಪಾ "

"ಉಚಿತ ನೇತ್ರ ಪರೀಕ್ಷೆ! ಎಸ್ ಐ, ಟಿ, ಇ. (SITE) ಅಲ್ಲ ... ಆದು ಎಸ್. ಐ. ಜಿ. ಹೆಚ್. ಟಿ, (SIGHT) ... ಈ ಊರಿನ " ಜಾಣಾಕ್ಷಿ ಬಡಾವಣೇ ಲಿರೋ ಪ್ರಾಥಮಿಕ ಶಾಲೇಲಿ ಎಲ್ಲರಿಗೂ ಫ್ರೀ ಸೈಟ್" ಆಪರೇಶನ್ ಅಂತೇ" ಎಂದು ರವಿ ಹೇಳಿದಾಗ, ನಾನು. ನನ್ನ ಹೆಂಡತಿ ನಮ್ಮ ನಮ್ಮ ಕನ್ನಡಕ ಸರಿ ಪಡಿಸಿಕೊಂಡು ತೆಪ್ಪಗೆ ಕಾಫಿ ಮುಗಿಸಿದೆವು !

ವೈದ್ಯನ ಹರಟೆ

ಶ್ರೀಪ್ರ

ನಾನೊಬ್ಬ ಹಳ್ಳಿವೈದ್ಯ ಅಲ್ಲ, ಅಲ್ಲ, ಹಳ್ಳಿಯಲ್ಲಿ ವೈದ್ಯ! ಪರಂಪರೆಯಿಂದ ಬಂದ ಆಸ್ತಿ ಸ್ವಲ್ಪ ಇದ್ದುದರಿಂದ ಹಳ್ಳಿಯಲ್ಲಿ ಇರಲು ಸಾಧ್ಯವಾಗಿತ್ತು, ಅಷ್ಟೆ. ಹೊಸದಾಗಿ ಯಾವ ಸಾಮ್ರಾಜ್ಯವನ್ನೂ ಕಟ್ಟದಿದ್ದರೂ, ಇರವುದನ್ನೇ ಕಾಪಾಡಿ ಕೊಂಡು ಬರುವುದೇ ಒಂದು ಗೆಲುವು ಎಂದು ನಂಬಿದ್ದೆ. ನಾನು ಹೊಸದಾಗಿ ವೃತ್ತಿ ಶುರುಮಾಡಿದ ದಿನಗಳು! ಕತ್ತಿಯ ಅಲುಗಿನಂತೆ ಆತಂಕಕಾರಿ ದಿನಗಳು! ಇಂಜೆಕ್ಷನ್ ಕೊಡೋಣ ಅಂದರೆ, ನಿಂ ತಂದೆ ಕೊಡೋಹಾಗೆ ನೋವಿಲ್ಲದಂತೆ ಕೊಡಪ್ಪ ಅಂತ ಗೋಗರೆಯೋರು. ಬಂದ ಕೋಪವನ್ನು (ದವಡೆಯಿಂದ) ದೂರ ಇರಿಸಿ ಇಂಜಕ್ಷನ್ ಕೊಡುತಿದ್ದೆ. ಮೂವತ್ತು ವರ್ಷಕ್ಕೂ ಮಿಗಿಲಾಗಿ ವೈದ್ಯರಾಗಿದ್ದ ನಂ ತಂದೆಯುವರಿಗೆ, "ಇವನು ಹೇಗೋ ನಿಭಾಯಿಸಿಕೊಂಡು ಹೊಗ್ತಾನೆ ಅಂತ ಕೆಟ್ಟ ಧೈರ್ಯ! ಒಂದು ಸಲ ನಮ್ಮ ತಂದೆ ರಜದಮೇಲೆ ಹೋಗಲೇ ಬೇಕಾಯ್ತು. ಸರಿ. ನನ್ ಸಾಹಸದ ಪ್ರದರ್ಶನ ಮಾಡಲು ಒಳ್ಳೆ ಅವಕಾಶ. ಅದೂ ಯಾವ ಸೆನ್ಸಾರೂ ಇಲ್ಲದೆ! ಹಳ್ಳಿಯ ಜನ, ನಮ್ಮ ತಂದೆಯುವರಿಲ್ಲದಿದ್ದು ನೋಡಿ, ಪರವಾಗಿಲ್ಲ, ನೀವೇ ನೋಡಿ ಅಂತ ಪರ್ಮಿಷನ್ ಕೊಡ್ತಿದ್ರು. ಮೈಸೂರು ಡಾಕ್ಟರ್ ಎಂದು ಖ್ಯಾತರಾಗಿದ್ದ ತಂದೆಯುವರಿಂದ ನನಗೂ ಸ್ವಲ್ಪ ಮರಿ-ಖ್ಯಾತಿ.

ಮಹಿಳೆಯೊಬ್ಬಳು ಬಂದು ಕೂತಳು. ಏನಮ್ಮ ತೊಂದರೆ: ಅಂದೆ 'ಡಾಗಟ್ರೆ! ನನಗೆ ಬೆಡ್ ಪ್ಲೆಷರ್ ಮಾತ್ರೆ ಬೇಕು! ಅಂದಳು. ನಾನು ಅವಕ್ಕಾದೆ. ಇಪ್ಪತ್ತನೆಯ ಶತಮಾನದ ವಿಮೆನ್ಸ್ ಲಿಬ್ ಈ ಹಳ್ಳಿಗೂ ಇಷ್ಟುಬೇಗ ಸೇರುತ್ತೆ ಅಂತ ಅಂತ ನನಗೆ ಅತ್ಯಾಶ್ಚರ್ಯ ಆಯಿತು. ಮರುಕ್ಷಣದಲ್ಲೇ (ಅರಳಿ ಮರ ಇಲ್ಲದಿದ್ರೂ) ಜ್ಞಾನೋದಯವಾಯ್ತು. ರಕ್ತದೊತ್ತಡ ಇಳಿಸಲು ಮಾತ್ರೆ ಬರಕೊಟ್ಟು, ನೀರು ಕುಡಿದೆ. ಯುವಕನೊಬ್ಬ ನೆಕ್ಸ್ಟ್ ಕೇಸು. ಕುಳಿತಕೂಡಲೇ ಕೆರೊಸೀನ್ ಕೊಡಿ

ಅಂದ! ನನ್ನ ದವಾಖಾನೆ ಪಕ್ಕದಲ್ಲೇ ಶೆಟ್ಟರ ಅಂಗಡಿ, ಅಲ್ಲಿಗೆ ಹೋಗೋದು ಬಿಟ್ಟು ಬಂದನಲ್ಲ ಅಂತ ರೇಗಿದೆ. ಅಷ್ಟರಲ್ಲಿ ಆವನ ತಾಯಿ ಬಂದಳು. ಇವನ್ಗೆ ಸಿಡಿಯೋ ತಲೆನೋವು ಬರ್‍ತದೆ! ಮಾತ್ರೆ ಕೊಡಿ ಅಂದಳು. ಜ್ಞಾನೋದಯ ನಂಬರ್ ಎರಡು!! ಕ್ರೋಸಿನ್ ಮಾತ್ರೆ ಬರಕೊಟ್ಟು ಕಾಫಿ ತರಿಸಿದೆ. ಬಾಗಿಲ ಹತ್ತಿರ ನೋಡಿದರೆ ಇನ್ನೂ ಮೂವತ್ತು ಜನ ಕಾದಿದಾರೆ. ಇವರಲ್ಲೆಲ್ಲ ಇನ್ನೇನು ವಿಶೇಷ ಚಿನ್ಹೆಗಳು ಅಡಗಿವೆಯೋ ಅಂತ ಚಿಂತಾ ಕ್ರಾಂತನಾಗಿ ಕುಳಿತುಬಿಟ್ಟೆ. ಹಳ್ಳಿಗ ಒಬ್ಬ ಗಾಬರಿಯಾಗಿ ಬಂದ. ಆಕಳಿಗೆ ಹೊಟ್ಟೇ ನೋವು ಅಂತ ಡಾಕುಟ್ರು ಕೊಟ್ಟಿದ್ದ ಪುಡಿ ನಂ ಮಾರ ನುಂಗಿ ಬಿಟ್ಟಿದ್ದಾನೆ, ಏನು ಮಾಡೋದು ಅಂತ. ಐದು ವರ್ಷದ ಮಾರ ನಿರ್ಲಿಕ್ತನಾಗಿ ಕೂತಿದ್ದ. ರೈತನಿಗಿಂತ ನನಗೇ ಗಾಬರಿ ಆಯ್ತು. ಮಾನವರ ಖಾಯಿಲೆಗಳ ಬಗ್ಗೆ ಸ್ವಲ್ಪ ಅರಿವು ಇದ್ರೂ, ಈ ನಭೂ-ತೋ ನ ಭವಿಷ್ಯತಿ ಸಂಗತಿಗೆ ಚಿಕಿತ್ಸೆ ನನಗೆ ಗೊತ್ತಿಲ್ಲ. ಬೇಗ ವೆಟರ್ನರಿ ಡಾಕ್ಟರಿಗೆ ಫೋನ್ ಮಾಡಿದೆ, ಅವರು ಅನುಭವಸ್ಥರು! ಏನಾಗಲ್ಲ ಬಿಡಿ, ಕಾರ್ಬನ್ ಅಷ್ಟೆ! ಎಷ್ಟೋಸಲ ಹೀಗಾಗಿದೆ. ಅಂತ ನಕ್ಕರು. ನಾನೂ ಧೈರ್ಯವಂತನಾದೆ. ಏನೂ ಆಗುಲ್ಲ, ಮಾರನಿಗೆ ಇನ್ನು ಐದು ವರ್ಷ ಹೊಟ್ಟೆ ನೋವು ಬರುಲ್ಲ ಅಂತ ಬೆನ್ನು ತಟ್ಟಿ ಕಳಿಸಿದೆ. ಟೈಂ ಸಿಕ್ಕಿದಾಗ ಇನ್ನೆಷ್ಟು ಹರಟೆ ಕಳಿಸ್ತೀನಿ!

ಬೋರ್‌ವೆಲ್ ಕಣ್ಣೀರು

ಜನ ಬಾಲ
ಎಳೆದು ಎಳೆದು
ಜಗ್ಗೀ ಜಗ್ಗೀ
ಕಣ್ಣೀರ ಕೋಡಿ
ಹರಿಸ್ತಾರವ್ವೋ
ಅಂತ ರೋಧಿಸಿದ್ದು
ಮನೆ ಎದುರಿನ
ಬೊರ್‌ವೆಲ್ !

— ಪ್ರಭಾ

Statement about ownership and other particulars about news paper APARANJI to be published in every year in the First issue appearing after the last day of February.

FORM IV

(SEE RULE 8)

1.	Place of Publication	Bangalore
2.	Periodicity	Monthly
3.	Printer's Name	V. R. Nath
	Nationality	Indian
	Address	44, Sampige Road, Malleswaram Bangalore-560 003
4.	Publisher's Name	M. Shivakumar
	Nationality	Indian
	Address	Aparanji Karyalaya 36, 6th Main Road, Malleswaram Bangalore-560 003
5.	Editor's Name	M. Shivakumar
	Nationality	Indian
	Address	Aparanji Karyalaya 36, 6th Main Road, Malleswaram Bangalore-560 003
6.	Name and Address of Individuals who own the News Paper and Partners/Shareholders holding more than one percent of the total capital	M. Shivakumar Sole Proprietor Aparanji Karyalaya 36, 6th Main Road, Malleswaram Bangalore-560 003

I, M. Shivakumar, hereby declare that the Particulars given above are true to the best of my knowledge and belief.

Sd/-

1st March 1993

M. SHIVAKUMAR
Publisher

REGISTERED No. BGW - 180

Printed by V R NATH for the Publisher M SHIVAKUMAR, Published and owned by M SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003 Editor M SHIVA KUMAR